ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೇಮಂತ್ ಚಂದನಗೌಡರ್

ಸೌಮ್ಯ ಆರ್. ರೆಡ್ಡಿ -ವಿರುದ್ಧ ಕರ್ನಾಟಕ ಸರ್ಕಾರದ ಪರವಾಗಿ ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 52731/2019 ಇದರೊಂದಿಗೆ ಇತರೆ,ದಿನಾಂಕ: 13 ನೇ ಫೆಬ್ರುವರಿ, 2020.

ತೀರ್ಪು

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಅವಲೋಕನ

ಸರ್ವೋಚ್ಚ ನ್ಯಾಯಾಲಯವು, ಸಾರ್ವಜನಿಕ ಕಾರ್ಯನಿರ್ವಾಹಕರು ಮಾಡಿದ ಆಪಾದಿತ ತಪ್ಪುಗಳ ವಿರುದ್ಧ ಸಾರ್ವಜನಿಕರು ಶಾಂತ ರೀತಿಯಲ್ಲಿ ಪ್ರತಿಭಟನೆ ಮತ್ತು ಪ್ರದರ್ಶನ ನಡೆಸುವುದಕ್ಕೆ ನಾಗರಿಕರಿಗೆ ಭಾರತ ಸಂವಿಧಾನದ 19 ನೇ ಅನುಚ್ಛೇದದ ( 3) ಮತ್ತು (ಬಿ) ಖಂಡದ ಅಡಿಯಲ್ಲಿ ಮೂಲಭೂತ ಹಕ್ಕನ್ನು ಪ್ರದತ್ತಗೊಳಿಸಲಾಗಿದೆ ಎಂದು ಪದೇ ಪದೇ ಅಭಿಪ್ರಾಯಪಟ್ಟಿದೆ.ಈ ಎರಡು ಉಪಬಂಧಗಳು, ಸರ್ಕಾರ ಮತ್ತು ಇತರ ಪ್ರಾಧಿಕಾರಗಳ ನಿರ್ಣಯಗಳ ವಿರುದ್ಧ ಸಾರ್ವಜನಿಕರು ಶಾಂತಿಯುತವಾಗಿ ಸಮಾವೇಶಗೊಳ್ಳುವುದಕ್ಕೆ ಮತ್ತು ಪ್ರತಿಭಟನೆ ಮಾಡುವುದಕ್ಕೆ ಹಕ್ಕನ್ನು ಪ್ರದತ್ತಗೊಳಿಸಿವೆ.ಇದು ಭಿನ್ನಾಭಿಪ್ರಾಯದ ಧ್ವನಿಯನ್ನು ವ್ಯಕ್ತಪಡಿಸುವುದಕ್ಕೆ ಸಾರ್ವಜನಿಕರಿಗೆ ಪದತ್ತಗೊಳಿಸಲಾದ ಮೂಲಭೂತ ಹಕ್ಕಾಗಿದೆ.ಭಿನ್ನಾಭಿಪ್ರಾಯ ಸರಿ ಎಂಬುದಾಗಲೀ ಅಥವಾ ತಪ್ಪಾಗಿದೆ ಎಂದಾಗಲಿ ಇಲ್ಲಿ ಅಪ್ರಸ್ತುತ, ದಂಡ ಪ್ರಕ್ರಿಯಾ ಸಂಹಿತೆ, 1973 (ಸಂಕ್ಷಿಪ್ತವಾಗಿ ಸದರಿ ಸಂಹಿತೆ) ರ 144 ನೇ ಪ್ರಕರಣದ ಅಡಿಯಲ್ಲಿ ನಿಷೇಧಾಜ್ಞೆಯ ಮೂಲಕ ಸಾರಭೂತ ಭಾಗವಾಗಿರುವ ಅಂತಹ ಮೌಲ್ಯಯುತವಾದ ಮೂಲಭೂತ ಹಕ್ಕನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿರುವಾಗ ಪ್ರತಿಭಟನೆಗಳನ್ನು ಮಾಡದಿರುವಂತೆ ನಾಗರೀಕರನ್ನು ಪ್ರತಿಬಂಧಿಸುವ ಯಾವುದೇ ಅಂಥ ಆದೇಶದ ಕಾನೂನು ಸಮ್ಮತತೆ ಮತ್ತು ಸಿಂಧುತ್ವವನ್ನು ಪರಿಶೀಲಿಸುವುದು ಸಂವಿಧಾನಾತ್ಮಕ ನ್ಯಾಯಾಲಯದ ಕರ್ತವ್ಯವಾಗಿದೆ.

2. 18 ನೇ ಡಿಸೆಂಬರ್, 2019 ರ ರಂದು ನಗರದ ಪೊಲೀಸ್ ಆಯುಕ್ತರು ಸಹ ಆಗಿರುವ ಬೆಂಗಳೂರು ನಗರ ಜಿಲ್ಲಾ ದಂಡಾಧಿಕಾರಿಯವರು ಮಾಡಿದ ಆದೇಶವನ್ನು ಭಾರತ ಸಂವಿಧಾನದ 226 ನೇ ಅನುಚ್ಛೇದದಡಿಯಲ್ಲಿ ಈ ರಿಟ್ ಅರ್ಜಿಗಳಲ್ಲಿ ಪ್ರಶ್ನಿಸಲಾಗಿದೆ.ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಇಂಗಿತವಾಗಿರುವ ಅಧಿಕಾರವನ್ನು ಚಲಾಯಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು, ಸದರಿ ಆದೇಶದ ಮೂಲಕ 19 ನೇ ಡಿಸೆಂಬರ್, 2019 ರ ಬೆಳಗ್ಗೆ 6 ಗಂಟೆಯಿಂದ 21 ನೇ ೧ ಡಿಸೆಂಬರ್ 2019 ರ ಮಧ್ಯರಾತ್ರಿವರೆಗೂ ಬೆಂಗಳೂರು ನಗರ ವ್ಯಾಪ್ತಿಯೊಳಗೆ ವಿವಿಧ ನಿಷೇಧಾಜ್ಞೆಗಳನ್ನು ವಿಧಿಸಿ ಆದೇಶವನ್ನು ಹೊರಡಿಸಲು ಮುಂದಾಗಿದ್ದರು.ಸದರಿ ಆದೇಶದಲ್ಲಿ, ಐದು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ಗುಂಪುಗೂಡಬಾರದೆಂದು ಯಾವುದೇ ಸಾರ್ವಜನಿಕ ಮೆರವಣಿಗೆ ಅಥವಾ ಪ್ರತಿಭಟನೆ, ರಸ್ತೆ ತಡೆ, ಸಾರ್ವಜನಿಕ ಸಭೆಗಳನ್ನು ನಡೆಸುವುದಕ್ಕೆ, ಆಯುಧಗಳನ್ನು ಸಾಗಿಸುವುದು ಮುಂತಾದ ಚಟುವಟಿಕೆಗಳನ್ನು ನಡೆಸಲು ನಿಷೇಧ ಹೇರಲಾಗಿತ್ತು.ಅಲ್ಲದೆ, ಸದರಿ ಅವಧಿಯಲ್ಲಿ ಯಾವುದೇ ಪ್ರತಿಭಟನೆ ನಡೆಸುವುದಕ್ಕಾಗಿ ಮಂಜೂರು ಮಾಡಿದ್ದ ಎಲ್ಲ ಅನುಮತಿಗಳನ್ನು ರದ್ದುಗೊಳಿಸಲಾಗಿದೆ ಎಂದು ಸಹ ಆದೇಶದಲ್ಲಿ ನಿರ್ದೇಶಿಸಿತ್ತು.

3. ಪ್ರಾಸಂಗಿಕವಾಗಿ, ಸಾರ್ವಜನಿಕ ಮೆರವಣಿಗೆ ಮತ್ತು ಸಮಾವೇಶಗಳ (ಬೆಂಗಳೂರು ನಗರ) ವಿನಿಯಮಗಳ ಆದೇಶ, 2009 ರ (ಸಂಕ್ಷಿಪ್ತವಾಗಿ ಸದರಿ ವಿನಿಯಮ ಆದೇಶ) ಅಡಿಯಲ್ಲಿ ಮಂಜೂರಾಗಿದ್ದ ಅನುಮತಿಗಳನ್ನು ರದ್ದುಗೊಳಿಸಿರುವುದನ್ನು ಸಹ ಇಲ್ಲಿ ಪ್ರಶ್ನಿಸಲಾಗಿದೆ.ಅರ್ಜಿಗಳನ್ನು 20 ನೇ ಡಿಸೆಂಬರ್, 2019 ರಂದು ಮಂಡಿಸಿದಾಗ, 18 ನೇ ಡಿಸೆಂಬರ್, 2019 ರ (ಸಂಕ್ಷಿಪ್ತವಾಗಿ " ಪ್ರಶ್ನಿತ ಆದೇಶ ") ಆದೇಶದ ಕಾನೂನು ಸಮ್ಮತತೆ

ಮತ್ತು ಸಿಂಧುತ್ವದ ಸಂಬಂಧದಲ್ಲಿ ಹಲವಾರು ವಿವಾದಾಂಶಗಳು ಉದ್ಭವಿಸಿದ್ದವು.ವಿಭಾಗೀಯ ಪೀಠವು, ಮಧ್ಯಂತರ ಪರಿಹಾರಕ್ಕೆ ಸಂಬಂಧಿಸಿದಂತೆ ಮಾಡಿಕೊಂಡ ಮನವಿಯನ್ನು ಪರಿಗಣಿಸುವಾಗ ಪ್ರಶ್ನಿತ ಆದೇಶವು ಮಾರನೆಯ ದಿನವೇ ಮುಕ್ತಾಯಗೊಳ್ಳುತ್ತದೆಂಬುದನ್ನು ಗಮನಿಸಿತು.ಆದುದರಿಂದ, ಸದರಿ ವಿನಿಯಮನ ಆದೇಶದ ಉಪಬಂಧಗಳ ಅಡಿಯಲ್ಲಿ ಪ್ರತಿಭಟನೆಯನ್ನು ಸಂಘಟಿಸುವುದಕ್ಕೆ ಸಂಬಂಧಿಸಿದಂತೆ ಮಾಡಬಹುದಾಗಿರುವ ಹೊಸ ಅರ್ಜಿಗಳೊಂದಿಗೆ ವ್ಯವಹರಿಸುವ ಸಂಬಂಧದಲ್ಲಿ ಕೆಲವು ಇತರ ನಿರ್ದೇಶನಗಳನ್ನು ಹೊರಡಿಸಲಾಯಿತು.ಅದೇ ಆದೇಶದಲ್ಲಿ, ಪ್ರಶ್ನಿತ ಆದೇಶವು ಮಾರನೆಯ ದಿನವೇ ಮುಕ್ತಾಯಗೊಂಡರೂ, ಪ್ರಶ್ನಿತ ಆದೇಶವು ನಾಗರಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವುದರಿಂದ ಪ್ರಶ್ನಿತ ಆದೇಶದ ಕಾನೂನು ಸೌಮ್ಯ ಆರ್. ರೆಡ್ಡಿ -ವಿರುದ್ಧ ಕರ್ನಾಟಕ ಸರ್ಕಾರ, ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು ಸಮ್ಮತತೆ ಮತ್ತು ಸಿಂಧುತ್ವವನ್ನು ನ್ಯಾಯಾಲಯವು ನಿರ್ಣಯಿಸಬೇಕಾಗಿದೆ ಎಂಬುದನ್ನು ಗಮನಿಸಲಾಗಿದೆ.

4. ಸದರಿ ವಿನಿಯಮನ ಆದೇಶದ ಉಪಬಂಧಗಳ ಅಡಿಯಲ್ಲಿ ನಾಗರೀಕತ್ವ (ತಿದ್ದುಪಡಿ) ಅಧಿನಿಯಮ, 2019 (ಸಂಕ್ಷಿಪ್ತವಾಗಿ ' ಸಿಎಎ) ರ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ಹಲವಾರು ಅನುಮತಿಗಳನ್ನು ನೀಡಲಾಗಿತ್ತು ಮತ್ತು ಪ್ರಶ್ನಿತ ಆದೇಶದ ಮೂಲಕ ಆ ಎಲ್ಲ ಅನುಮತಿಗಳನ್ನು ರದ್ದುಗೊಳಿಸಲಾಯಿತು ಎಂಬುದು ನಿರ್ವಿವಾದ.ಅರ್ಜಿದಾರರು ಮಂಡಿಸುತ್ತಿರುವ ವಾದವೆಂದರೆ, ಪ್ರಶ್ನಿತ ಆದೇಶವು ಕಾನೂನುಬಾಹಿರವಾದ ಕಾರಣದಿಂದಲೇ ಅದು ನಿರರ್ಥಕವಾಗುತ್ತದೆಂಬ ಸಂಗತಿಯ ಹೊರತಾಗಿ, ಈ ಪ್ರಶ್ನಿತ ಆದೇಶವು, ಭಾರತದ ಸಂವಿಧಾನದ 19 ನೇ ಅನುಚ್ಛೇದದ ( ಎ) ಮತ್ತು (ಬಿ) ಖಂಡದ ಅಡಿಯಲ್ಲಿ ನಾಗರಿಕರಿಗೆ ಶಾಂತಿಯುತವಾಗಿ ಪ್ರತಿಭಟನೆ ಮಾಡುವುದಕ್ಕೆ ನೀಡಲಾದ ಮೂಲಭೂತ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ.ಈ ಕಾರಣದಿಂದಲೇ ಆದೇಶವು ಸ್ವತಃ ಕಾರ್ಯ ನಿರ್ವಹಿಸಿದರೂ, ಅದು ಶಾಂತಿಯುತವಾಗಿ ಪ್ರತಿಭಟನೆ ನಡೆಸುವುದಕ್ಕೆ ನೀಡಲಾದ ಅನುಮತಿಯನ್ನು ರದ್ದುಪಡಿಸಿ ಆ ಮೂಲಕ ಶಾಂತಿಯುತವಾಗಿ ಪ್ರತಿಭಟನೆ ಮಾಡುವುದಕ್ಕೆ ಭಾರತ ಸಂವಿಧಾನದ 19 ನೇ ಅನುಚ್ಛೇದದ ( ಎ) ಮತ್ತು (ಬಿ) ಖಂಡದ ಅಡಿಯಲ್ಲಿ ನೀಡಲಾಗಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದರಿಂದ ಸದರಿ ಆದೇಶದ ಕಾನೂನು ಸಮ್ಮತತೆ ಮತ್ತು ಸಿಂಧುತ್ವವನ್ನು ಈ ನ್ಯಾಯಾಲಯವು ನಿರ್ಣಯಿಸಬೇಕಾಗುತ್ತದೆ.

ಅರ್ಜಿದಾರರ ಪರವಾಗಿ ಸಲ್ಲಿಸಲಾದ ನಿವೇದನೆಗಳು:

5. ರಿಟ್ ಅರ್ಜಿಸಂಖ್ಯೆ: 52731/2019 ಮತ್ತು ಇತರ ಅರ್ಜಿಗಳಲ್ಲಿ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ವಿವರವಾದ ನಿವೇದನೆಗಳನ್ನು ಸಲ್ಲಿಸಿದ್ದಾರೆ:ಮೊದಲನೆಯದಾಗಿ, ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣ ಮತ್ತು ನಿರ್ದಿಷ್ಟವಾಗಿ ಅದರ ( 1) ನೇ ಉಪ-ಪ್ರಕರಣದ ಕಡೆ ನಮ್ಮ ಗಮನವನ್ನು ಸೆಳೆದು, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಪೂರ್ವ ಷರತ್ತಾಗಿರುವ ಅಭಿಪ್ರಾಯಗಳನ್ನು ರೂಪಿಸುವಿಕೆಯ ಪಶ್ನಿತ ಆದೇಶದಿಂದ ಪ್ರತಿಬಿಂಬಿತವಾಗುವುದೇ ಇಲ್ಲ ಎಂದು ನಿವೇದಿಸಿರುವರು.ಮಾನ್ಯ ಹಿರಿಯ ನ್ಯಾಯವಾದಿಗಳು ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಎರಡು ನಿರ್ಣಯಗಳನ್ನು ಅವಲ ಂ ಬನೆಯಾಗಿ ಇಲ್ಲಿ ಮಂಡಿಸಿರುವರು.ಮೊದಲನೆಯದಾಗಿ, ರಾಮಲೀಲಾ ಮೈದಾನ್ ಘಟನೆ, ಆಇರ ' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಚ ನೀಡಿದ್ದ ನಿರ್ಣಯವನ್ನು ಮತ್ತು ಎರಡನೆಯದಾಗಿ, ಸರ್ವೋಚ್ಚ ನ್ಯಾಯಾಲಯವು 9 ನೇ ಜನವರಿ 2020 ರಂದು ಅನುರಾಧ ಭಾಸಿನ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು 2 [2] ಮತ್ತು ಸಂವಾದಿ ಅರ್ಜಿಗಳ ಮೊಕದ್ದಮೆಯಲ್ಲಿ ನೀಡಿದ ಇತ್ತೀಚಿನ ನಿರ್ಣಯಗಳನ್ನು ಇಲ್ಲಿ ಅವಲಂಬನೆಯಾಗಿ ಉಲ್ಲೇಖಿಸಿರುವರು.ಅವು ಕಾನೂನಿನ ಸಂಕ್ಷಿಪ್ತ ಅಂಶಗಳನ್ನು ಒಳಗೊಂಡಿವೆ.

6. ಮಾನ್ಯ ಹಿರಿಯ ನ್ಯಾಯವಾದಿಗಳು ಎರಡು ನಿರ್ಣಯಗಳಲ್ಲಿನ ವಿವಿಧ ಪ್ಯಾರಾಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದು ಅವುಗಳಲ್ಲಿ ಕಾನೂನು ನಿಶ್ಚಿತ ರೂಪದಲ್ಲಿ ಇರುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಿಪಡಿಸಿರುವರು.ಮೊದಲನೆಯದಾಗಿ, ಪ್ರಾಧಿಕಾರವು ತಪ್ಪಿಸಬೇಕೆಂದು ಕೋರಲಾಗಿರುವ ಹಾನಿಯನ್ನು ತಡೆಯುವುದಕ್ಕೆ ಯಾವುವೇ ಪರ್ಯಾಯ ವಿಧಾನಗಳು ಇಲ್ಲವೆಂದು ಮನಗೊಂಡ ತರುವಾಯ ಮಾತ್ರವೇ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬಹುದು ಎಂದು ನಿವೇದಿಸಿರುತ್ತಾರೆ.ಎರಡನೆಯದಾಗಿ, ದಂಡಾಧಿಕಾರಿಯು ಸದರಿ ಸಂಹಿತೆಯ 144

ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಪದತ್ತವಾದ ವಿಶೇಷಾಧಿಕಾರವನ್ನು ಚಲಾಯಿಸುವ ಅಗತ್ಯತೆಯ ಕುರಿತು ದಂಡಾಧಿಕಾರಿಯು ಜಾಗರೂಕತೆಯಿಂದ ವಿಚಾರಣೆ ಮಾಡಿದ ತರುವಾಯ ಮಾತ್ರವೇ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಜಿಲ್ಲಾ ದಂಡಾಧಿಕಾರಿಯು ರೂಪಿಸುವ ಅಗತ್ಯವಿರುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ ಎಂದು ನಿವೇದಿಸಿರುವರು.ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಅಂಥ ಆದೇಶವನ್ನು ಹೊರಡಿಸುವುದಕ್ಕೆ ದಂಡಾಧಿಕಾರಿಗಳಿಗೆ ಕಾರಣಗಳನ್ನು ಸೂಚಿಸಬೇಕಾಗಿರುವ ಕ್ರಮದಲ್ಲಿಯೇ ಮುಖ್ಯ ಸಂಗತಿಗಳನ್ನು ಮಂಡಿಸುವುದು ಕಡ್ಡಾಯವಾಗಿದೆ ಎಂದು ನಿವೇದಿಸಿರುತ್ತಾರೆ.ಮುಂದುವರೆದು, ಅವರು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ ಸದರಿ ಸಂಹಿತೆಯ 144 ನೇ ಪ್ರಕರನದ ( 1) ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶಗಳಿಗೆ ಪ್ರಮಾಣಾನುಸಾರ ಸಿದ್ಧಾಂತವನ್ನು ಸಮಾನವಾಗಿ ಅನ್ವಯಿಸಬೇಕಾಗುತ್ತದೆ ಎಂದು ನಿವೇದಿಸಿರುವರು.ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿನ ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಈ ನ್ಯಾಯಾಲಯವು ಅಂಥ ಆದೇಶಗಳ ಮೇಲೆ ನ್ಯಾಯಿಕ ಪುನರೀಕ್ಷಣೆಯ ಅಧಿಕಾರವನ್ನು ಹೊಂದಿದೆ ಎಂಬುದು ಸುಸ್ಥಾಪಿತವಾಗಿರುವುದರಿಂದ ಅಂಥ ಆದೇಶವನ್ನು ಹೊರಡಿಸಿದ ಪ್ರಾಧಿಕಾರವು ನ್ಯಾಯಿಕ ಪರಿಶೀಲನೆಗೆ ಸಾಧ್ಯವಾಗುವ ಹಾಗೆ ಮುಖ್ಯ ಸಂಗತಿಗಳನ್ನು ಹೇಳಬೇಕಾದುದು ಅತ್ಯಂತ ಅಗತ್ಯವಾಗಿದೆ ಎಂದು ನಿವೇದಿಸಿರುತ್ತಾರೆ.ಪ್ರಶ್ನಿತ ಆದೇಶವು ಇಡೀ ಬೆಂಗಳೂರು ನಗರಕ್ಕೆ ವ್ಯಾಪ್ತವಾಗುವಂತಹ ಸರ್ವ ವ್ಯಾಪಕ ಆದೇಶವಾಗಿದೆ ಎಂದು ನ್ಯಾಯವಾದಿಗಳು ಒತ್ತಿ ಹೇಳಿರುವರು.ಆದುದರಿಂದ, ನಿರ್ಬಂದಗಳು ತಕ್ಷಣ ಹೇರುವುದಕ್ಕಾಗಿ ಅಭಿಪ್ರಾಯವನ್ನು ರೂಪಿಸುವ ಸಂಗತಿಯ ಅಸ್ತಿತ್ವದ ಸಂಗತಿಯ ಕುರಿತು ಪ್ರಾಧಿಕಾರವು ಸ್ವತಃ ಮನಗಾಣುವುದು ಅತ್ಯಗತ್ಯವಾಗಿದೆ.ಆದೇಶವು ತೀವ್ರ ಪರಿಣಾಮಕಾರಿ ಸ್ವರೂಪದಲ್ಲಿದ್ದು ಅದು ಸದರಿ ವಿನಿಯಮ ಆದೇಶದ ( 4) ರಿಂದ ( 7) ರ ಖಂಡಗಳು ಅಗತ್ಯಪಡಿಸಿದಂತೆ ಅರ್ಜಿಗಳನ್ನು ವಿವರವಾಗಿ ವಿಚಾರಣೆ ಮಾಡಿದ ತರುವಾಯ ಪ್ರತಿಭಟನೆ ನಡೆಸುವುದಕ್ಕೆ ಈ ಮುಂಚೆಯೇ ನೀಡಲಾದ ಎಲ್ಲ ಅನುಮತಿಗಳನ್ನು ರದ್ದುಗೊಳಿಸುವ ಪ್ರಭಾವವನ್ನು ಹೊಂದಿವೆ ಎಂದು ನಿವೇದಿಸಿರುವರು.ನ್ಯಾಯವಾದಿಗಳು ಅವಲಂಬನೆಯಾಗಿ ರಾಮಲೀಲಾ ಮೈದಾನ್ (ಮೇಅನ) ಮೊಕದ್ದಮೆಯ ಪ್ರಸಿದ್ಧ ನಿರ್ಣಯವನ್ನು ಉಲ್ಲೇಖಿಸುತ್ತಾ, ಅಂಥ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರಾಧಿಕಾರವು ಯಾವಾಗಲು ವ್ಯಕ್ತಿನಿಷ್ಠವಾಗಿದ್ದರೂ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸುಸಂಗತ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ವ್ಯಕ್ತಿನಿಷ್ಠ ನಿರ್ಣಯದಿಂದ ವಸ್ತು ನಿಷ್ಠ ನಿರ್ಣಯಕ್ಕೆ ಬರಬೇಕಾಗುತ್ತದೆ.

7. ತದನಂತರ ಮಾನ್ಯ ಹಿರಿಯ ನ್ಯಾಯವಾದಿಗಳು ಪ್ರಶ್ನಿತ ಆದೇಶದ ಕಡೆ ನಮ್ಮ ಗಮನವನ್ನು ಸೆಳೆಯುತ್ತಾ, ಪ್ರಶ್ನಿತ ಆದೇಶದಲ್ಲಿ, ನಗರದಲ್ಲಿನ ಪೊಲೀಸ್ ಉಪ ಆಯುಕ್ತರು ತಮ್ಮ ಪತ್ರದಲ್ಲಿ ಜಿಲ್ಲಾ ದಂಡಾಧಿಕಾರಿಯು ಆಗಿರುವ ಪೊಲೀಸ್ ಆಯುಕ್ತರಿಗೆ ಏನನ್ನು ಹೇಳಿದರೋ ಅದನ್ನು ಯಥಾವತ್ತಾಗಿ ಹೇಳಲಾಗಿದೆ ಎ ಂ ದು ನಿವೇದಿಸಿರುವರು.ಸದರಿ ಸ ಂ ಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ಅಭಿಪ್ರಾಯವನ್ನು ರೂಪಿಸಿರುವುದು ಪ್ರಶ್ನಿತ ಆದೇಶದಿಂದ ಪ್ರತಿಬಿಂಬಿತವಾಗಿಲ್ಲವೆಂಬ ಸಂಗತಿಯ ಹೊರತಾಗಿಯೂ ಯಾವುದೇ ಮುಖ್ಯ ಸಂಗತಿಗಳನ್ನು ಹೇಳಿರುವುದಿಲ್ಲ, ಕಾರಣಗಳನ್ನೂ ತಿಳಿಸಿರುವುದಿಲ್ಲ ಮತ್ತು ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶ ಹೊರಡಿಸುವುದಕ್ಕೆ ಪೊಲೀಸ್ ಉಪ ಆಯುಕ್ತರು ಮಾಡಿದ ಕೋರಿಕೆಯನ್ನು ಮಾತ್ರ ಜಿಲ್ಲಾ ದಂಡಾಧಿಕಾರಿಯು ಒಪ್ಪಿಕೊಂಡಿರುವಂತೆ ತೋರುತ್ತದೆ ಎಂಬುದನ್ನು ತೋರಿಸಿದ್ದಾರೆ.ಸದರಿ ಸಂಹಿತೆಯ 144 ನೇ ಪ್ರಕರಣವನ್ನು ಜಾರಿ ಮಾಡುವುದಕ್ಕೆ ಪತ್ರವನ್ನು ಬರೆದಿದ್ದ ಕೆಲವು ಪೊಲೀಸ್ ಉಪ ಆಯುಕ್ತರು 19 ನೇ ಡಿಸೆಂಬರ್, 2019 ರಿಂದ 21 ನೇ ಡಿಸೆಂಬರ್ 2019 ರ ನಡುವಿನ ಅವಧಿಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುವುದಕ್ಕಾಗಿ ಸದರಿ ವಿನಿಯಮನ ಆದೇಶದ ಅಡಿಯಲ್ಲಿ ಸ್ವತಃ ತಾವೇ ಅನುಮತಿಗಳನ್ನು ನೀಡಿದ್ದರು ಮತ್ತು ಪ್ರಶ್ನಿತ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ಸದರಿ ಸಂಗತಿಯನ್ನು ಜಿಲ್ಲಾ ದಂಡಾಧಿಕಾರಿಯವರ ಗಮನಕ್ಕೆ ತಂದಿರುವುದಿಲ್ಲ ಎಂದು ನ್ಯಾಯವಾದಿಗಳು ನಿವೇದಿಸಿರುವರು.

8. ಸದರಿ ವಿನಿಯಮನ ಆದೇಶದ ವಿವಿಧ ಕಂಡಿಕೆಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಾ, ನ್ಯಾಯವಾದಿಗಳು ಪ್ರತಿಭಟನೆಯನ್ನು ನಡೆಸುವುದಕ್ಕೆ ಅನುಮತಿಯನ್ನು ನೀಡುವುದಕ್ಕೆ ಮೊದಲು ಅರ್ಜಿಗಳನ್ನು ವಿವರವಾಗಿ ಪರಿಶೀಲಿಸುವುದು ಅಗತ್ಯ ಎಂದು ನಿವೇದಿಸಿರುವರು.

ಸದರಿ ವಿನಿಯಮನ ಆದೇಶದ ( 7) ನೇ ಖಂಡದಲ್ಲಿ 58 ಸೌಮ್ಯ ಆರ್. ರೆಡ್ಡಿ -ವಿರುದ್ಧ ಕರ್ನಾಟಕ ಸರ್ಕಾರ, ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು ಪಟ್ಟಿ ಮಾಡಲಾದ ಹಲವಾರು ಅಂಶಗಳನ್ನು ಪರಿಗಣಿಸುವುದು ಅಗತ್ಯ.ಲೈಸೆನ್ಸ್ ಗಾಗಿ ಅಥವಾ ಅನುಮತಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯ ಹೇಳಿಕೆಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಸಹ ಕಲ್ಪಿಸಲಾಗಿದೆ.ಪ್ರಶ್ನಿತ ಆದೇಶವು ಅಭಿಪ್ರಾಯದ ರೂಪುಗೊಳ್ಳುವಿಕೆಯನ್ನು ಮುಖ್ಯ ಸಂಗತಿಗಳನ್ನು ಮತ್ತು ಅದನ್ನು ಹೊರಡಿಸುವುದಕ್ಕೆ ಕಾರಣಗಳನ್ನು ಪ್ರತಿಬಿಂಬಿಸುವುದಿಲ್ಲವೆಂಬ ಸಂಗತಿಯ ಹೊರತಾಗಿಯೂ ಇದನ್ನು ಗಮನಕ್ಕೆ ತಂದುಕೊಳ್ಳದಿರುವುದನ್ನೂ ತೋರಿಸುತ್ತದಾದ್ದರಿಂದ ಆದೇಶವು ನಿರರ್ಥಕವಾಗುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.

9. ಸದರಿ ವಿನಿಯಮನ ಆದೇಶದಡಿಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ವಿವಿಧ ಪ್ರಾಧಿಕಾರಿಗಳು ತತ್ಪರಿಣಾಮವಾಗಿ ಮಂಜೂರು ಮಾಡಿದ ಅನುಮತಿಗಳನ್ನು ತೋರಿಸುವ ಕೆಲವು ದಸ್ತಾವೇಜುಗಳನ್ನು ಅವರು ಸಲ್ಲಿಸಿದರೆಂಬುದನ್ನು ನಾವು ಗಮನಿಸಬಹುದು.ಆದಾಗ್ಯೂ, ಈ ಆದೇಶಗಳು ಪ್ರಶ್ನಿತ ವಿಷಯವಾಗದಿರುವುದರಿಂದ ಸದರಿ ಆದೇಶಗಳ ಕಾನೂನು ಸಮ್ಮತತೆ ಮತ್ತು ಸಿಂಧುತ್ವವನ್ನು ಪರಿಶೀಲಿಸಲು ನಮಗೆ ಸಾಧ್ಯವಾಗದು.ಕೊನೆಯದಾಗಿ, ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಮೊಹಿಂದರ್ ಸಿಂಗ್ ಗಿಲ್ -ವಿರುದ್ಧ ಕೇಂದ್ರೀಯ ಚುನಾವಣಾ ಆಯುಕ್ತರು, ನವದೆಹಲಿ ಮತ್ತು ಇತರರು ಮೊಕದ್ದಮೆಯಲ್ಲಿ ನೀಡಿದ ಪ್ರಸಿದ್ಧ ನಿರ್ಣಯವನ್ನು ಇಲ್ಲಿ ಅವಲಂಬನೆಯಾಗಿ ಉಲ್ಲೇಖಿಸಿರುವರು ಮತ್ತು ಸದರಿ ನಿರ್ಣಯದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಪ್ಯಾರಾ 8 ರಲ್ಲಿ ಹೇಳಿರುವುದನ್ನು ಎತ್ತಿ ಹಿಡಿದಿರುವರು.ನ್ಯಾಯವಾದಿಗಳು ಪ್ರಶ್ನಿತ ಆದೇಶವನ್ನು ಹೊರಡಿಸಿದ ಜಿಲ್ಲಾ ಮ್ಯಾಜಿಸ್ಟ್ರೇಟರು ಆಕ್ಷೇಪಣೆಗಳ ಹೇಳಿಕೆಗಳನ್ನು ದಾಖಲಿಸಿರುವುದಿಲ್ಲ ಎಂಬ ಸಂಗತಿಯ ಹೊರತಾಗಿ, ಆದೇಶದ ಸಿಂಧುತ್ವವನ್ನು ಬೆಂಬಲಿಸಿರುವುದಕ್ಕೆ ಸಂಬಂಧಿಸಿದ ಕಾರಣಗಳನ್ನು ಸಾಕ್ಷ್ಯಗಳ ಮೂಲಕ ಅಥವಾ ಹೆಚ್ಚು ವರಿ ಆಧಾರಗಳನ್ನು ಮಂಡಿಸುವ ಮೂಲಕ ಚ ಒದಗಿಸಿರುವುದಿಲ್ಲ ಎಂದು ನಿವೇದಿಸಿರುವರು.

ಮಾನ್ಯ ಅಡ್ವಕೇಟ್ ಜನರಲ್ ಅವರ ನಿವೇದನೆಗಳು:

10. ಮಾನ್ಯ ಅಡ್ವಕೇಟ್ ಜನರಲ್ರವರು ಸಹ ತುಂಬಾ ವಿವರವಾಗಿ ನಿವೇದನೆಗಳನ್ನು ಮಾಡಿಕೊಂಡರು.ಮೊದಲನೆಯದಾಗಿ, ಜಿಲ್ಲಾ ದಂಡಾಧಿಕಾರಿಯವರು ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಪ್ರಭಾವವನ್ನುಂಟು ಮಾಡಬಹುದಾದ ತೀವ್ರ ತುರ್ತು ಸನ್ನಿವೇಶದ ಬಗ್ಗೆ ವ್ಯವಹರಿಸುತ್ತಿದ್ದರು ಎಂಬ ಸಂಗತಿಯ ಹಿನ್ನೆಲೆಯಲ್ಲಿ ಜಿಲ್ಲಾ ದಂಡಾಧಿಕಾರಿಯವರ ಕ್ರಮವನ್ನು ನಿರ್ಣಯಿಸಬೇಕಾಗುತ್ತದೆಂದು ಅವರು ಒತ್ತಿ ಹೇಳಿದರು.ತಮ್ಮ ನಿವೇದನೆಗೆ ಅವಲಂಬನೆಯಾಗಿ ಅವರು ಸರ್ವೋಚ್ಚ ನ್ಯಾಯಾಲಯದ ರಾಮಲೀಲಾ ಮೈದಾನ್ (ಮೇಲಿನ) ಮೊಕದ್ದಮೆಯ ನಿರ್ಣಯದ 84 ನೇ ಪ್ಯಾರಾದಲ್ಲಿ ಹೇಳಿರುವ ಸಂಗತಿಯನ್ನು ಪೂರಕವಾಗಿ ಉಲ್ಲೇಖಿಸುತ್ತಾ, ಇಂತಹ ವಿಷಯಗಳಲ್ಲಿ, ಸನ್ನಿಹಿತ ಅಪಾಯವುಂಟಾದ ಸಂದರ್ಭಗಳಲ್ಲಿ ಅಂಥ ನಿರ್ಣಯಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿರುವುದರಿಂದ ಅಂಥ ನಿರ್ಣಯಗಳನ್ನು ಮಾಡಲು ಪ್ರಾಧಿಕಾರಗಳಿಗೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ಮತ್ತು ವಿವೇಚನಾಧಿಕಾರವನ್ನು ಕಲ್ಪಿಸಬೇಕಾಗುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಎರಡನೆಯದಾಗಿ, ಈ ನ್ಯಾಯಾಲಯವು ನಿರ್ಣಯ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದೆಯೇ ಹೊರತು, ಸ್ವತಃ ನಿರ್ಣಯವನ್ನು ಸರಿಪಡಿಸುವುದಕ್ಕೆ ಸಂಬಂಧಿಸಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಹಾಗೆ ಮಾಡುವಾಗ ಈ ನ್ಯಾಯಾಲಯವು, ಜಿಲ್ಲಾ ದಂಡಾಧಿಕಾರಿಯ ಮುಂದೆ ಆ ಯಾವುದಾದರೂ ಸಾಕ್ಷ್ಯಾಧಾರವಿದೆಯೇ ಎಂದು ಪರಿಶೀಲಿಸಬೇಕಾಗುತ್ತದೆ ಮತ್ತು ಸುಸ್ಥಾಪಿತ ಕಾನೂನಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು ಸಾಕ್ಷ್ಯಾಧಾರದ ಸಮರ್ಪಕತೆಯ ಪ್ರಶ್ನೆಯ ಬಗ್ಗೆ ಚರ್ಚಿಸಲು ಸಾಧ್ಯವಿಲ್ಲ ಎಂದು ನಿವೇದಿಸಿರುವರು.

11. ಮಾನ್ಯ ಅಡ್ವಕೇಟ್ ಜನರಲ್ ಪ್ರಶ್ನಿತ ಆದೇಶದ ಕಡೆಗೆ ಹಾಗೂ ಸರ್ವೋಚ್ಚ ನ್ಯಾಯಾಲಯವು ಅನುರಾಧ ಭಾಸಿನ್ (ಮೇಲಿನ) ಮೊಕದ್ದಮೆಯಲ್ಲಿ ಚ ನೀಡಿದ ನಿರ್ಣಯದ ಕಡೆಗೆ ನಮ್ಮ ಗಮನವನ್ನು ಸೆಳೆದಿರುವರು.ಅಲ್ಲದೆ ಸದರಿ ನಿರ್ಣಯದ 108 ನೇ ಪ್ಯಾರಾದಲ್ಲಿನ ಹೇಳಲಾದ ಅಂಶಗಳ ಕಡೆಗೂ ಸಹ ನಮ್ಮ ಗಮನವನ್ನು ಸೆಳೆದಿರುತ್ತಾರೆ. ಬೆಂಗಳೂರು ನಗರದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಎಲ್ಲ ಪೊಲೀಸ್ ಉಪ-ಆಯುಕ್ತರು ಆಕ್ಷೇಪಣೆಗಳ ಹೇಳಿಕೆಗಳಿಗೆ ಲಗತ್ತಿಸಿರುವ ಪತ್ರಗಳನ್ನು/ವರದಿಗಳನ್ನು ಸಲ್ಲಿಸಿರುತ್ತಾರೆ.ಅದರಲ್ಲಿ ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ

ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದನ್ನು ಸಮರ್ಥಿಸುವ ಸನ್ನಿವೇಶದ ಅಸ್ತಿತ್ವವನ್ನು ತೋರಿಸಲಾಗಿರುತ್ತದೆ.ತಮ್ಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪ ಆಯುಕ್ತರು ಆತಂಕಗಳನ್ನು ವರದಿ ಮಾಡಿದಾಗ, ಜಿಲ್ಲಾ ದಂಡಾಧಿಕಾರಿಗಳು ಸದರಿ ಪೊಲೀಸ್ ಅಧಿಕಾರಿಗಳ ಹೇಳಿಕೆಯನ್ನು ನಂಬಿರುವುದು ಸಮರ್ಥನೀಯವಾಗಿತ್ತು.ಆದುದರಿಂದ, ಮೊಕದ್ದಮೆಯ ಸಂಗತಿಗಳ ಹಿನ್ನೆಲೆಯಲ್ಲಿ, ಜಿಲ್ಲಾ ದಂಡಾಧಿಕಾರಿಯನ್ನು ಯಾವುದೇ ಹೆಚ್ಚಿನ ವಿಚಾರಣೆ ಮಾಡುವುದು ಅಗತ್ಯವಿಲ್ಲ.ಮೊಕದ್ದಮೆಯ ಸಂಗತಿಗಳ ಹಿನ್ನೆಲೆಯಲ್ಲಿ ವಿಚಾರಣೆ ಪದವನ್ನು ಅರ್ಥೈಸಬೇಕಾಗಿದೆ ಮತ್ತು ಈ ಮೊಕದ್ದಮೆಯಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸ್ ಉಪ ಆಯುಕ್ತರ ವರದಿಗಳಿದ್ದವು ಮತ್ತು ವರದಿಗಳನ್ನು ಪರಿಶೀಲಿಸಿದ ತರುವಾಯ, ಜಿಲ್ಲಾ ದಂಡಾಧಿಕಾರಿಯವರು ಸದರಿ ವರದಿಗಳ ಸರಿತನವನ್ನು ನಂಬಬೇಕಾಗುತ್ತದೆ ಎಂದು ನಿವೇದಿಸಿರುವರು.ಪೊಲೀಸ್ ಉಪ ಆಯುಕ್ತರು ಸದರಿ ವರದಿಗಳು/ಪತ್ರಗಳಲ್ಲಿ ಏನನ್ನು ಪ್ರತಿಪಾದಿಸಿರುವರೋ ಅದು ಪ್ರಶ್ನಿತ ಆದೇಶದಲ್ಲಿ ಕಂಡು ಬಂದಿರುವ ಮುಖ್ಯ ಸಂಗತಿಗಳಾಗಿವೆ ಎಂದೂ ನಿವೇದಿಸಿರುವರು." ಮುಖ್ಯ ಸಂಗತಿಗಳು " ಮತ್ತು " ಮುಖ್ಯ ವಿವರಗಳು " ಎಂಬ ಪದಗಳ ನಡುವೆ ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆ ಎಂದು ನಿವೇದಿಸಿರುವರು.ಈ ಸಂಬಂಧದಲ್ಲಿ ಅವರು ಸರ್ವೋಚ್ಚ ನ್ಯಾಯಾಲಯವು ಚ ಮಹೀಂದ್ರಪಾಲ್ -ವಿರುದ್ಧ-ರಾಂ ದಾಸ್ ಮಲಂಗರ್ ಮತ್ತು ಇತರರು ಮೊಕದ್ದಮೆಯಲ್ಲಿ ನೀಡಿದ ನಿರ್ಣಯವನ್ನು ಅವಲಂಬಿಸಿರುತ್ತಾರೆ.ವ್ಯಾಜ್ಯ ಕಾರಣವನ್ನು ಸಂಪೂರ್ಣವಾಗಿ ಬಹಿರಂಗಗೊಳಿಸುವುದಕ್ಕೆ ಅತ್ಯಗತ್ಯವಾದ ಸಂಗತಿಗಳನ್ನು ಮುಖ್ಯ ಸಂಗತಿಗಳೆಂದು ಮತ್ತು ವಿವರಗಳನ್ನು ೨೨ ಮುಖ್ಯ ವಿವರಗಳಾಗುತ್ತವೆಂದು ನಿವೇದಿಸಿರುವರು.ಪಶ್ಚಿತ ಆದೇಶದ ಕಡೆಗೆ ನಮ್ಮ ಗಮನ ಸೆಳೆಯುತ್ತಾ ಪೊಲೀಸ್ ಉಪ ಆಯುಕ್ತರು ಬರೆದ ಪತ್ರಗಳಿಂದ ಪ್ರತಿಬಿಂಬಿತವಾದಂತೆ, ಮುಖ್ಯ ಸಂಗತಿಗಳನ್ನು ಬಹಿರಂಗಗೊಳಿಸಲಾಯಿತು ಎಂದು ನಿವೇದಿಸಿರುವರು.19 ಮತ್ತು 20 ನೇ ಡಿಸೆಂಬರ್, 2019 ರಂದು, ಹಲವು ರಾಜಕೀಯ ಸಂಘಟನೆಗಳು ಮತ್ತು ಪಕ್ಷಗಳು ಸಿಎಎ ವಿರುದ್ಧ ಪ್ರತಿಭಟನೆಯಾಗಿ, ಅಖಿಲ ಭಾರತ ಬಂದ್ಗಾಗಿ ಕರೆ ನೀಡಿದ್ದವು.ಆದ್ದರಿಂದ, ಈ ಸಂದರ್ಭದಲ್ಲಿ ಯಾವುದೇ ಪ್ರತಿಭಟನೆಗಳು ಅಥವಾ ಪ್ರದರ್ಶನಗಳನ್ನು ನಡೆಸಿದರೆ, ಸಮಾಜ ಘಾತುಕ ಶಕ್ತಿಗಳು ಪ್ರತಿಭಟನೆಯ ಹೆಸರಿನಲ್ಲಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ನಾಗರಿಕರಿಗೆ ಅನನುಕೂಲತೆ ಉಂಟು ಮಾಡುವಂತಹ ಸಾಧ್ಯತೆ ಇತ್ತು. ಮುಂದುವರೆಸುತ್ತಾ, ಆದ್ದರಿಂದ ಕಾರಣಗಳನ್ನು ನಿರೂಪಿಸುವ ಪ್ರಶ್ನಿತ ಆದೇಶದಲ್ಲಿ ಮುಖ್ಯ ಸಂಗತಿಗಳನ್ನು ನಿರೂಪಿಸಲಾಗಿದೆ ಎಂದು ನಿವೇದಿಸಿರುವರು.ಮುಖ್ಯ ಸಂಗತಿಗಳನ್ನು ಒಳಗೊಂಡ ಮತ್ತು ಅಂತಹ ಮುಖ್ಯ ಸಂಗತಿಗಳ ಹಿನ್ನೆಲೆಯಲ್ಲಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಅವಶ್ಯಕವಾಗಿದೆ ಎಂಬ ಅಭಿಪ್ರಾಯವನ್ನು ರೂಪಿಸಿರುವುದನ್ನು ಒಳಗೊಂಡಿರುವ ಪೊಲೀಸ್ ಉಪ ಆಯುಕ್ತರು ಸಲ್ಲಿಸಿದ ವರದಿಗಳಲ್ಲಿ ಹೇಳಿರುವುದನ್ನು ಜಿಲ್ಲಾ ದಂಡಾಧಿಕಾರಿಯವರು ವಾದಿಸಿರುತ್ತಾರೆ.ಮುಂದುವರೆಸುತ್ತಾ, ಈ ನ್ಯಾಯಾಲಯವು ಸಾಕಷ್ಟು ಮುಖ್ಯ ಸಂಗತಿಗಳನ್ನು ಪರಿಶೀಲಿಸಿರುವುದಿಲ್ಲ ಎಂದು ಪುನಃ ಒತ್ತಿ ಹೇಳಿರುವರು.ಇಂತಹ ಸನ್ನಿವೇಶ ಸಂದರ್ಭಗಳಲ್ಲಿ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವ ಮೂಲಕ, ಪ್ರತಿಭಟನೆ ನಡೆಸುವುದಕ್ಕೆ ಈಗಾಗಲೇ ಅನುಮತಿಗಳನ್ನು ನೀಡಿದ್ದರೂ, ಅವುಗಳನ್ನು ಅನೂರ್ಜಿತ ಗೊಳಿಸಿರುವುದರಲ್ಲಿ ಯಾವುದೇ ದೋಷ ಕಂಡುಬರುವುದಿಲ್ಲ ಎಂದು ಪುನರುಚ್ಚರಿಸಿರುವರು.

12. ಮಾನ್ಯ ಅಡ್ವಕೇಟ್ ಜನರಲ್ ಅವರು ಈ ಸಂದರ್ಭದಲ್ಲಿ, ಸರ್ವೋಚ್ಚ ನ್ಯಾಯಾಲಯವು ಮದ್ದೂರ್ ಕಿಸಾನ್ ಶಕ್ತಿ ಸಂಘಟನ್ ವಿರುದ್ಧ ಭಾರತ ಒಕ್ಕೂಟ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ ನೀಡಿದ ಉತ್ಕೃಷ್ಟ ನಿರ್ಣಯದ ಕಡೆಗೆ ನಮ್ಮ ಗಮನವನ್ನು ಸೆಳೆದಿರುವರು.ಪ್ರದರ್ಶನಗಳನ್ನು ನಡೆಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳನ್ನು ಮಾಡಿದ್ದರು ಎಂಬ ಸಂಗತಿಯೂ ಸಹ ಸುಸಂಗತವಾದ ಅಂಶವಾಗಿದೆ ಎಂದು ಸೂಚಿಸಿದರು.ಸನ್ನಿಹಿತ ಅಪಾಯ ಪರೀಕ್ಷೆಗಳನ್ನು ಅನ್ವಯಿಸಲು ಸಾಧ್ಯವಿಲ್ಲ ಮತ್ತು ಅನ್ವಯಿಸಬೇಕಾದ ಪರೀಕ್ಷೆಯು ಆಪಾಯದ ಭಯವಾಗಿದೆ ಎಂದು ನಿವೇದಿಸಿರುವರು.ಮುಂದುವರೆದು ಅವರು, ಮೊಕದ್ದಮೆಯು ಸಾಕ್ಷ್ಯಾಧಾರ ಇಲ್ಲದಿರುವುದರ ಮೊಕದ್ದಮೆಯಾಗಿರುವುದಿಲ್ಲ ಮತ್ತು ವಾಸ್ತವವಾಗಿ, ಪೊಲೀಸ್ ಡಿಜಿ ಮತ್ತು ಐಜಿಯವರೂ ಸಹದಿನಾಂಕ: 18 ನೇ ಡಿಸೆಂಬರ್, 2019 ಪತ್ರದ ಮೂಲಕ ಭಾರತ್ ಬಂದ್ಗೆ ಕರೆ ನೀಡಿ ಪ್ರತಿಭಟನೆಗಳನ್ನು ನಡೆಸಿದರೆ ಕೋಮು ಉದ್ವಿಗ್ನತೆಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು ಎಂದು ನಿವೇದಿಸಿರುವರು.ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುವಂತೆ ಬಂದ್ನ ದಿನದಂದು ಪ್ರತಿಭಟನೆಯನ್ನು ಸಂಘಟಿಸುವುದರಿಂದ ಕಾನೂನು ಮತ್ತು ಸುವ್ಯವಸ್ಥೆ ಸನ್ನಿವೇಶ ಸೃಷ್ಟಿಯಾಗುವ ಆತಂಕ ಇರುವ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಈ ಮನವರಿಕೆ ಇತ್ತೆ ಎಂಬುದು

ವಿವಾದಾಂಶವಾಗಿದೆ ಎಂದು ನಿವೇದಿಸಿರುವರು.ಮುಂದುವರೆಸುತ್ತಾ, ಇಡೀ ಮಂಗಳೂರು ನಗರ ವ್ಯಾಪ್ತಿಗೆ ನಿಷೇದಾಜ್ಞೆಯ ಆದೇಶವನ್ನು ಹೊರಡಿಸಿರುವುದರಲ್ಲಿ ಯಾವುದೇ ದೋಷವು ಕಂಡು ಬಂದಿಲ್ಲವೆಂದು ನಿವೇದಿಸಿರುವರು.ಸರ್ವೋಚ್ಚ ನ್ಯಾಯಾಲಯವು ಅನುರಾಧ ಚ ಭಾಸಿನ್ (ಮೇಅನ) ಮೊಕದ್ದಮೆಯಲ್ಲಿ ನಿರ್ಣಯಿಸಿರುವಂತೆ ಕಾನೂನು ಮತ್ತು ಸುವ್ಯವಸ್ಥೆ, ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಷ್ಟ್ರದ ಭದ್ರತೆಗೆ ಆತಂಕವನ್ನುಂಟು ಮಾಡುವಂತಹ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ವಿವಿಧ ಮಾನದಂಡಗಳನ್ನು ಅನ್ವಯಿಸಿಕೊಳ್ಳಬೇಕಾಗುತ್ತದೆ.ವಿಭಿನ್ನ ಸನ್ನಿವೇಶಗಳನ್ನು ನಿಭಾಯಿಸಲು ಭಿನ್ನ ಭಿನ್ನ ಪ್ರಸ್ತಾವನೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾದ್ದರಿಂದ, ಪೊಲೀಸ್ ಆಯುಕ್ತರು ಆಗಿರುವ ಜಿಲ್ಲಾ ದಂಡಾಧಿಕಾರಿಯವರು ಅಳವಡಿಸಿಕೊಂಡ ವಿಧಾನಗಳಲ್ಲಿ ಯಾವುದೇ ದೋಷವನ್ನು ಹುಡುಕುವುದು ಅಸಾಧ್ಯ ಎಂದು ನಿವೇದಿಸಿರುವರು.

ಮಧ್ಯಕಾಲೀನ ಅರ್ಜಿಯಲ್ಲಿ ಅರ್ಜಿದಾರರ ನಿವೇದನೆಗಳು:

13. ಮಧ್ಯಕಾಲೀನ ಅರ್ಜಿ ಐ.ಎ.ಸಂಖ್ಯೆ: 1/2020 ಯನ್ನು ಪಕ್ಷಕಾರನೇ ಖುದ್ದಾಗಿ ಸಲ್ಲಿಸಿದ್ದಾನೆ.ಈ ನ್ಯಾಯಾಲಯವು ಪ್ರಶ್ನಿತ ಆದೇಶ ಸಿಂಧುತ್ವದ ತಾಂತ್ರಿಕ ಅಂಶದ ಬಗ್ಗೆ ಗಮನ ಹರಿಸಬಹುದಾಗಿದ್ದಾಗ್ಯೂ, ಇದರ ಮತ್ತೊಂದು ಮಗ್ಗುಲನ್ನೂ ೧ ಪರಿಗಣಿಸುವುದು ಅಗತ್ಯ ಎಂದು ನಿವೇದಿಸಿರುವರು.ದಿನಾಂಕ: 19 ಮತ್ತು 20 ನೇ ಡಿಸೆಂಬರ್, 2019 ರಂದು ಉದ್ಭವವಾಗಿದ್ದ ಸನ್ನಿವೇಶಗಳ ಕಾರಣದಿಂದಾಗಿ ಸಾರ್ವಜನಿಕ ಸದಸ್ಯರು ಬಹಳಷ್ಟು ಕಿರುಕುಳ ಅನುಭವಿಸುವಂತಾಯಿತು ಎಂದು ನಿವೇದಿಸಿರುವರು.ಕಾನೂನು ಮತ್ತು ಸುವ್ಯವಸ್ಥೆಯ ಸನ್ನಿವೇಶ ಉದ್ಭವಿಸುವುದನ್ನು ತಪ್ಪಿಸುವುದು ಮತ್ತು ನಾಗರಿಕರಿಗೆ ಆಗುವ ಅನನುಕೂಲತೆಗಳನ್ನು ಕಡಿಮೆ ಮಾಡುವುದು ರಾಜ್ಯದ ಕರ್ತವ್ಯವಾಗಿದೆ.19 ನೇ ಮತ್ತು 20 ನೇ ಡಿಸೆಂಬರ್, 2019 ರಂದು ನಿಖರವಾಗಿ ಏನು ನಡೆಯಿತು ಮತ್ತು ಯಾವ ರೀತಿಯಲ್ಲಿ ಪ್ರತಿಭಟನೆಗಳನ್ನು ನಡೆಸಲಾಯಿತು ಎಂಬ ಅಂಶಗಳ ಹಿನ್ನೆಲೆಯಲ್ಲಿ ಪ್ರಶ್ನಿತ ಆದೇಶವನ್ನು ನಿರ್ಣಯಿಸಬೇಕಾಗುತ್ತದೆ ಎಂದು ನಿವೇದಿಸುತ್ತಾ, ಸಾರ್ವಜನಿಕ ಸದಸ್ಯರು ಯಾವ ರೀತಿಯಲ್ಲಿ ಅನನುಕೂಲತೆಗಳನ್ನು ಎದುರಿಸಿದರು ಎಂಬುದನ್ನು ತೋರಿಸುವ ಛಾಯಾಚಿತ್ರಗಳನ್ನು ಹಾಜರುಪಡಿಸುವುದಕ್ಕೆ ಸಿದ್ಧರಿದ್ದೇವೆ ಎಂದು ನಿವೇದಿಸಿರುವರು.

ನಿವೇದನೆಗಳ ಪರ್ಯಾಲೋಚನೆ:

14. ಈ ನ್ಯಾಯಾಲಯದ ಮುಂದೆ ಮಾಡಿದ ನಿವೇದನೆಗಳನ್ನು ನಾವು ತುಂಬಾ ಜಾಗರೂಕತೆಯಿಂದ ಪರಿಗಣನೆಗೆ ತೆಗೆದುಕೊಂಡಿದ್ದೇವೆ.ಈಗಾಗಲೇ ಗಮನಿಸಿರುವಂತೆ ಪ್ರಶ್ನಿತ ಆದೇಶವು ಶಾಂತಿಯುತ ಪ್ರತಿಭಟನೆ ಮಾಡುವ ನಾಗರಿಕರ ಮೂಲಭೂತ ಹಕ್ಕಿಗೆ ಬಾಧಕವಾಗಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು.ಸರ್ವೋಚ್ಚ ನ್ಯಾಯಾಲಯವು ಮದ್ದೂರ್ ಕಿಸಾನ್ ಶಕ್ತಿ ಸಂಘಟನೆ (ಮೇಅನ) ಚ ಮೊಕದ್ದಮೆಯಲ್ಲಿ ನೀಡಿದ ನಿರ್ಣಯದ 48 ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

66 "48. ವಿಷಯದ ಮೇಲಿನ ಕಾನೂನಿಗೆ ಸಂಬಂಧಪಟ್ಟ ಮಟ್ಟಿಗೆ ಯಾವ ಪಕ್ಷಕಾರರೂ ವಿವಾದಾಂಶವನ್ನು ಅಂಗೀಕರಿಸಿಲ್ಲವೆಂದು ನಾವು ಪ್ರಾರಂಭದಲ್ಲಿಯೇ ಹೇಳಬಹುದಾಗಿದೆ.ನಿಸ್ಸಂಶಯವಾಗಿ, ನಾಗರಿಕರು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳುವ ಸಲುವಾಗಿ ಮತ್ತು ಸಂಬಂಧಪಟ್ಟ ವೇದಿಕೆಗಳಲ್ಲಿ ತಮ್ಮ ಕುಂದುಕೊರತೆಗಳನ್ನು ಆಲಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಶಾಂತಿಯುತ ಪ್ರದರ್ಶನಗಳನ್ನು ನಡೆಸುವುದು ಅವರ ಮೂಲಭೂತ ಹಕ್ಕಾಗಿದೆ.ಭಾರತ ಸಂವಿಧಾನದ 19 ( 1) ( 3) ಮತ್ತು 19 ( 1) (ಬಿ) ಯ ಅನುಚ್ಛೇದದ ಅಡಿಯಲ್ಲಿ ಈ ಮೂಲಭೂತ ಹಕ್ಕನ್ನು ನಿರ್ದಿಷ್ಟವಾಗಿ ಪ್ರತಿಷ್ಠಾಪಿಸಲಾಗಿದೆ.ನಾಗರಿಕರಿಗೆ 19 ( 1) (ಎ) ಅನುಚ್ಛೇದವು ತುಂಬಾ ಮೌಲ್ಯಯುತವಾದ ಹಕ್ಕನ್ನು ಎಂದರೆ ವಾಕ್ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ.ಅದರಂತೆಯೇ 19 ( 1) (ಬಿ) ಅನುಚ್ಛೇದವು ಶಸ್ತ್ರಾಸ್ತ್ರಗಳನ್ನು ಹೊಂದಿರದೇ ಶಾಂತಿಯುತವಾಗಿ ಸಮಾವೇಶಗೊಳಿಸುವ ಹಕ್ಕನ್ನು ನೀಡಿದೆ.ಇದರೊಂದಿಗೆ ಈ ಉಭಯ ಹಕ್ಕುಗಳು ಈ ದೇಶದ ಜನತೆಗೆ ಸರ್ಕಾರ ಅಥವಾ ಸರ್ಕಾರಿ ಪ್ರಾಧಿಕಾರಗಳು ತೆಗೆದುಕೊಳ್ಳುವ ಯಾವುದೇ ಕ್ರಮ ಅಥವಾ ನಿರ್ಣಯದ ವಿರುದ್ಧ ಶಾಂತಿಯುತವಾಗಿ ಒಂದೆಡೆ ಸೇರಲು ಮತ್ತು ಪ್ರತಿಭಟನೆ ಮಾಡುವ ಹಕ್ಕನ್ನು ಖಚಿತಪಡಿಸಿದೆ.ಶಾಸನಾತ್ಮಕ ಭಿನ್ನಾಭಿಪ್ರಾಯ ಯಾವುದೇ ಪ್ರಜಾಪ್ರಭುತ್ವದ ವಿಶಿಷ್ಟ ಲಕ್ಷಣವಾಗಿದೆ.ಪ್ರತಿಭಟನೆಕಾರರು ಎತ್ತಿರುವ ವಿವಾದಾಂಶಗಳು ಸರಿಯೇ ಅಥವಾ ತಪ್ಪೇ ಅಥವಾ ಅದು ನ್ಯಾಯಸಮ್ಮತವಾದುದೇ ಅಥವಾ ಅದು ನ್ಯಾಯ ಸಮ್ಮತವಾದುದಲ್ಲವೇ ಎಂಬುದು ಪ್ರಶ್ನಿತವಾಗುವುದಿಲ್ಲ.ಉದ್ಭವಿಸಿರುವ ಮೂಲಭೂತ ಅಂಶವೆಂದರೆ, ಬಾಧಿತ

ಜನತೆ ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಪ್ರಜಾಪ್ರಭುತ್ವದಲ್ಲಿ ಅವರಿಗೆ ನೀಡಲಾದ ಈ ಮೂಲಭೂತ ಹಕ್ಕಿನ ಕುರಿತದ್ದಾಗಿದೆ.ಭಿನ್ನಮತೀಯರು ಅಲ್ಪಸಂಖ್ಯಾತರಾಗಿರಬಹುದು.ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರುತ್ತಾರೆ.ಮೊದಲನೆಯದಾಗಿ ಕ್ಷುಲ್ಲಕವೆಂದು ಅಥವಾ ಅಪ್ರಸ್ತುತವೆಂದು ಕಂಡು ಬಂದಿರಬಹುದಾದಂತಹ ಒಂದು ನಿರ್ದಿಷ್ಟ ಉದ್ದೇಶದ ಬಗ್ಗೆ ಯುಕ್ತವಾದ ಧ್ವನಿ ಎತ್ತಿ ಚರ್ಚೆ ಮಾಡಿದಾಗ ಅದು ಚಾಲನೆಯನ್ನು ಮತ್ತು ಅಂಗೀಕಾರಾರ್ಹತೆಯನ್ನು ಪಡೆದುಕೊಳ್ಳಬಹುದು.(ಒತ್ತು ನೀಡಲಾಗಿದೆ)

ಆದಾಗ್ಯೂ, ಅದೇ ನಿರ್ಣಯದಲ್ಲಿ ಅಭಿಪ್ರಾಯಪಡಲಾದಂತೆ ಸಾರ್ವಜನಿಕ ಹಿತಾಸಕ್ತಿಗಳನ್ನು ಪರಿಗಣಿಸಿ ಸದರಿ ಹಕ್ಕನ್ನು ಸರಿದೂಗಿಸಬೇಕಾಗುತ್ತದೆ.ಆದರೆ ಪ್ರತಿಭಟನೆಗಳನ್ನು ಪ್ರತಿಬಂಧಿಸಿ ಮತ್ತು ಪ್ರತಿಭಟನೆ ಮಾಡುವುದಕ್ಕೆ ಈಗಾಗಲೇ ನೀಡಲಾದ ಅನುಮತಿಗಳನ್ನು ಅನೂರ್ಜಿತಗೊಳಿಸಿ ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡಿದಾಗ ಶಾಂತಿಯುತ ಪ್ರತಿಭಟನೆ ನಡೆಸುವುದಕ್ಕೆ ಭಾರತ ಸಂವಿಧಾನದ 19 ನೇ ಅನುಚ್ಛೇದದ ( ಎ) ಮತ್ತು (ಬಿ) ಖಂಡದ ಅಡಿಯಲ್ಲಿ ಸುನಿಶ್ಚಿತಗೊಳಿಸಿದ ಮೂಲಭೂತ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆಂಬುದು ವಿವಾದಾಂಶವಾಗಿದೆ.ಆದುದರಿಂದ ನ್ಯಾಯಾಲಯವು ಅಂಥ ನಿರ್ಬಂಧಕಾಜ್ಞೆ ಆದೇಶಗಳ ಕಾನೂನು ಸಮ್ಮತೆಯನ್ನು ಪರಿಶೀಲಿಸಲು ಮುಂದಾದಾಗ ಅದು ಕೇವಲ ತಾಂತ್ರಿಕತೆಯ ವಿಷಯವಾಗಿರದೆ, ಮೂಲ ತತ್ವಗಳ ವಿಷಯವಾಗಿದೆ.ಪ್ರಜಾಪ್ರಭುತ್ವದ ಮೂಲಭೂತ ಲಕ್ಷಣವಾದ ಶಾಂತಿಯುತ ಪ್ರತಿಭಟನೆ ನಡೆಸಲು ಇರುವ ಮೂಲಭೂತ ಹಕ್ಕಿನ ಉಲ್ಲಂಘನೆಯನ್ನು ರಿಟ್ ನ್ಯಾಯಾಲಯವು ಹಗುರವಾಗಿ ತೆಗೆದುಕೊಳ್ಳಬಾರದು.

15. ಶಾಂತಿ ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸುವ ಸಂಪೂರ್ಣ ಜವಾಬ್ದಾರಿಯು ರಾಜ್ಯ ಸರ್ಕಾರದ್ದಾಗಿದೆ ಎಂಬ ಸಂಗತಿಯ ಕುರಿತ ಯಾವುದೇ ಎರಡನೇ ಅಭಿಪ್ರಾಯವೇ ಇಲ್ಲ. ತನ್ನ ನಾಗರಿಕರ ಕಾಪಾಡುವ ಹೊಣೆಗಾರಿಕೆ ರಾಜ್ಯದ್ದಾಗಿದೆ ಎಂಬ ದೃಷ್ಟಿಯಲ್ಲಿ ರಾಜ್ಯವು ನಾಗರಿಕರ ಹಿತಾಸಕ್ತಿಯ ರಕ್ಷಕನಾಗಿರುತ್ತದೆ.ಆದುದರಿಂದ ವಾಸ್ತವ ಸಂಗತಿ ಹೀಗಿದ್ದಾಗ ಮತ್ತು ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಯುಕ್ತವಾಗಿ ಮತ್ತು ಕಾನೂನು ಸಮ್ಮತವಾಗಿ ಚಲಾಯಿಸಿದಾಗ, ಪ್ರತಿಭಟನೆಗಳನ್ನು ಮತ್ತು ಪ್ರದರ್ಶನಗಳನ್ನು ನಡೆಸುವ ಚಟುವಟಿಕೆಗಳನ್ನು ನಿರ್ಬಂಧಿಸುವ ತನ್ನ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಚೆನ್ನಾಗಿಯೇ ನಿಬಾಯಿಸುವರು.ಭಾರತ ಸಂವಿಧಾನದ 19 ನೇ ಅನುಚ್ಛೇದದ ( ಎ) ಮತ್ತು (ಬಿ) ಖಂಡಗಳ ಅಡಿಯಲ್ಲಿನ ಮೂಲಭೂತ ಹಕ್ಕುಗಳು ಯಾವಾಗಲು ಯುಕ್ತ ನಿರ್ಬಂಧಗಳಿಗೊಳಪಟ್ಟಿರುತ್ತವೆ ಹಾಗೂ ರಾಜ್ಯವು ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಕನೂ ಆಗಿದೆ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು ಆದ್ದರಿಂದ

ಕನಿಷ್ಠ ಸಾಧ್ಯತಾ ನಿರ್ಬಂಧಗಳನ್ನು ವಿಧಿಸುವ ಮೂಲಕ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುವುದಕ್ಕೆ ಅದು ಪ್ರತಿಯೊಂದು ಪ್ರಯತ್ನವನ್ನೂ ಮಾಡಬೇಕು.

16. ಪ್ರಸ್ತುತ ಈಗ ನಾವು, ಪ್ರಶ್ನಿತ ಆದೇಶದ ಕಾನೂನು ಸಮ್ಮತತೆ ಮತ್ತು ಸಿಂಧುತ್ವವನ್ನು ಪರಿಶೀಲಿಸೋಣ.ಕಾನೂನು ಸಮ್ಮತತೆ ಮತ್ತು ಸಿಂಧುತ್ವ ವಿವಾದಾಂಶಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಈ ನ್ಯಾಯಾಲಯವು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಗೆ ಮಾತ್ರವೇ ಸಂಬಂಧಿಸಿರುತ್ತದೆಯೇ ವಿನಾ, ನಿರ್ಣಯದ ಸರಿತನವನ್ನು ಪರಿಗಣಿಸಲು ಅಲ್ಲ. ಈಗ ನಾವು ಪ್ರಶ್ನಿತ ಆದೇಶದ ವಿಷಯಕ್ಕೆ ಬರೋಣ. ಪ್ರಶ್ನಿತ ಆದೇಶವು, ಬೆಂಗಳೂರು ನಗರದಲ್ಲಿ ವಿವಿಧ ವಿಭಾಗಗಳ ಪೊಲೀಸ್ ಉಪ ಅಯುಕ್ತರು ಜಿಲ್ಲಾ ಮ್ಯಾಜಿಸ್ಟ್ರೇಟರ್ ಆಗಿರುವ ಪೊಲೀಸ್ ಆಯುಕ್ತರಿಗೆ ಸದರಿ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಬರೆದಿದ್ದ ಎಂಟು ವರದಿಗಳ ಪತ್ರಗಳನ್ನು ಉಲ್ಲೇಖಿಸುತ್ತದೆ.ಸರ್ಕಾರವು ಸದರಿ ಪತ್ರಗಳ ಪ್ರತಿಗಳನ್ನು ಆಕ್ಷೇಪಣೆಗಳ ಹೇಳಿಕೆಗಳೊಂದಿಗೆ ಹಾಜರುಪಡಿಸಿದೆ.ಸದರಿ ಪತ್ರಗಳನ್ನು ನಾವು ತುಂಬಾ ಎಚ್ಚರಿಕೆಯಿಂದ ಅವಲೋಕಿಸಿದ್ದೇವೆ.ಸದರಿ ಪತ್ರಗಳಲ್ಲಿ ಸಿಎಎ ಯನ್ನು ವಿರೋಧಿಸುವುದಕ್ಕೆ ರಾಜಕೀಯ ಮತ್ತು ಇತರ ಸಂಘಟನೆಗಳು ನಡೆಸುವ ಪ್ರತಿಭಟನೆಯ ಅವಧಿಯಲ್ಲಿ ಸಮಾಜ ಘಾತುಕ ಶಕ್ತಿಗಳು ಸಾರ್ವಜನಿಕ ಆಸ್ತಿಗಳಿಗೆ ಹಾನಿಯುಂಟು ಮಾಡುವ ಸಾಧ್ಯತೆ ಇರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು D ಕಾಪಾಡಲು ಮತ್ತು ಸಾರ್ವಜನಿಕ ಆಸ್ತಿಗಳನ್ನು ಕಾಪಾಡುವ ಸಲುವಾಗಿ ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ನಿರ್ಬಂಧಕಾಜ್ಞೆಯ ಆದೇಶವನ್ನು ಹೊರಡಿಸುವಂತೆ ಕೋರಲಾಗಿದೆ.ಒಂದು ಅಥವಾ ಎರಡು ಪತ್ರಗಳಲ್ಲಿ ಮಾತ್ರವೇ ಕೆಲವೊಂದು ಹೆಚ್ಚುವರಿ

ಹೇಳಿಕೆಗಳನ್ನು ಮಾಡಿದೆ.ಕೇಂದ್ರ ವಿಭಾಗದ ಪೊಲೀಸ್ ಉಪ ಆಯುಕ್ತರು ಬರೆದಿರುವ ಅಂಥ ಒಂದು ಪತ್ರದ 33 ನೇ ಪುಟದಲ್ಲಿ ಸ್ವೀಕರಿಸಲಾದ ನಂಬಲರ್ಹ ಮಾಹಿತಿಯ ಆಧಾರದ ಮೇಲೆ ಎಂದು ಹೇಳಲಾಗಿದೆ.ಕೋಮು ಸಾಮರಸ್ಯವನ್ನು ಕದಡುವ ಸಾಧ್ಯತೆ ಇದೆ. ವೈಟ್ ಫೀಲ್ಡ್ ವಿಭಾಗದ ಪೊಲೀಸ್ ಉಪ ಆಯುಕ್ತರು ಬರೆದಿರುವ ಪತ್ರದಲ್ಲಿ, 19 ನೇ ಮತ್ತು 20 ನೇ ಡಿಸೆಂಬರ್, 2019 ರಂದು ಭಾರತ್ ಬಂದ್ಗೆ ಕರೆ ಕೊಟ್ಟಿರುವುದನ್ನು ಉಲ್ಲೇಖಿಸಿರುವರು.

ಪತ್ರದಲ್ಲಿ ವೈಟ್ ಫೀಲ್ಡ್ ಪ್ರದೇಶವನ್ನು ಸೂಕ್ಷ್ಮ ಪ್ರದೇಶವೆಂದು ಸಹ ನಮೂದಿಸಿರುವರು.ಅನ್ಯಥಾ ಸದರಿ ಪತ್ರಗಳೆಲ್ಲವು ಒಂದೇ ರೀತಿಯ ಪತ್ರಗಳಾಗಿವೆ.

17. ಅರ್ಜಿಗೆ ಲಗತ್ತಾಗಿರುವ ಪ್ರಶ್ನಿತ ಆದೇಶದ ಇಂಗ್ಲಿಷ್ ಭಾಷಾಂತರದ ಸರಿತನವು ವಿವಾದಿತವಾಗದಿದ್ದಲ್ಲಿ ಅದನ್ನು ಮತ್ತೆ ಇಲ್ಲಿ ಮಂಡಿಸುವುದು ಸಮುಚಿತವಾಗುತ್ತದೆ.ಅದನ್ನು ಈ ಕೆಳಗಿನಂತೆ ಓದಿಕೊಳ್ಳುವುದು:

ಪ್ರಸ್ತಾವನೆ:

ಬೆಂಗಳೂರು ನಗರ ಕಮೀಷನರೇಟ್ನ ವ್ಯಾಪ್ತಿಯೊಳಗಿನ ಪೊಲೀಸ್ ವಿಭಾಗಗಳ ಉಪ ಆಯುಕ್ತರುಗಳ ವರದಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಇತ್ತೀಚೆಗೆ ಜಾರಿ ಮಾಡಿದ ಸಿಎಎ ಮತ್ತು ಎನ್ಆರ್ಸಿಯನ್ನು ವಿರೋಧಿಸಿ ಯಾವುದೇ ಪ್ರತಿಭಟನೆ| ಮುಷ್ಕರ/ಮೆರವಣಿಗೆ/ಸಮಾರಂಭಗಳನ್ನು ನಡೆಸುವುದರಿಂದ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಬಾದಕವುಂಟು ಮಾಡುವ ಯಾವುದೇ ಘಟನೆಗಳನ್ನು ನಿರ್ಬಂಧಿಸುವುದಕ್ಕಾಗಿ 144 ನೇ ಪ್ರಕರಣವನ್ನು ಜಾರಿ ಮಾಡುವಂತೆ ಕೋರಿಕೆ ಸಲ್ಲಿಸಲಾಗಿದೆ.ಮೇಲೆ ಸಲ್ಲಿಸಿದ ವರದಿಗಳಲ್ಲಿ ಈ ಕೆಳಗಿನ ಅಂಶಗಳನ್ನು ನಮೂದಿಸಲಾಗಿದೆ:

ಕೇಂದ್ರ ಸರ್ಕಾರವು, ಇತ್ತೀಚೆಗೆ ಪೌರತ್ವ ತಿದ್ದುಪಡಿ ಅಧಿನಿಯಮ (ಸಿಎಎ) ಮತ್ತು ನಾಗರಿಕರ ರಾಷ್ಟ್ರೀಯ ನೋಂದಣಿ (ಎನ್ಆರ್ಸಿ) ಇವುಗಳನ್ನು ಜಾರಿ ಮಾಡಿದೆ.ಈ ಅಧಿನಿಯಮಗಳನ್ನು ವಿರೋಧಿಸಿ, ಹಲವಾರು ರಾಜಕೀಯ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು ಮತ್ತು ಇತರ ಸಂಘಟನೆಗಳು ಸಾಮಾಜಿಕ ಮಾಧ್ಯಮಗಳ ಮುಖಾಂತರ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿವೆ.ಈ ಪ್ರಚೋದನಾತ್ಮಕ ಹೇಳಿಕೆಗಳಿಂದ ಉತ್ತೇಜಿತರಾಗಿ ಬೆಂಗಳೂರು ನಗರದ ಸರಹದ್ದಿನೊಳಗಿನ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪೂರ್ವಾನುಮತಿ ಪಡೆದುಕೊಳ್ಳದೇ ಹಠಾತ್ ಪ್ರತಿಭಟನೆಗಳನ್ನು ನಡೆಸಲಾಗುತ್ತಿದೆ.ಇದಲ್ಲದೆ,ದಿನಾಂಕ: 19.12.2019 ಮತ್ತು 20.12.2019 ರಂದು ಹಲವಾರು ರಾಜಕೀಯ ಪಕ್ಷಗಳು, ಸಂಘಟನೆಗಳು ಮೇಲೆ ಹೇಳಲಾದ ಅಧಿನಿಯಮಗಳು ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಯಶಸ್ವಿಯಾಗಿ ಅಂಗೀಕಾರವಾಗುತ್ತಿರುವ ಸಂಬಂಧದಲ್ಲಿ ಅಖಿಲ ಭಾರತ್ ಬಂದ್ಗೆ ಕರೆ ನೀಡಿರುತ್ತವೆ.

ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ನ ವ್ಯಾಪ್ತಿಯೊಳಗಿನ ಪ್ರದೇಶಗಳು ಸೂಕ್ಷ್ಮ ಪ್ರದೇಶಗಳಾಗಿರುವುದರಿಂದ, ಮೇಲೆ ಹೇಳಲಾದ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತಿಭಟನೆ/ಮುಷ್ಕರ/ಮೆರವಣಿಗೆಯಂತಹ/ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ, ಅದು ತೀವ್ರ ಸ್ವರೂಪವನ್ನು ಪಡೆದುಕೊಳ್ಳುವ ಸಾಧ್ಯತೆ ಇರುತ್ತದೆ ಮತ್ತು ನಗರದಲ್ಲಿ ಸಾರ್ವಜನಿಕರ ಓಡಾಟಕ್ಕೆ ಅನನುಕೂಲತೆ ಉಂಟಾಗುವ ಮತ್ತು ಶಾಂತಿ ಮತ್ತು ಸುವ್ಯವಸ್ಥೆಗೆ ಬಾಧಕವುಂಟಾಗುವ ಸಂಭಾವ್ಯತೆ ಇದೆ. ಪ್ರತಿಭಟನೆಯ ಹೆಸರಿನಲ್ಲಿ ತಮ್ಮ ಕೈಗೆ ಕಾನೂನು ತೆಗೆದುಕೊಳ್ಳುವಂತಹ ವ್ಯಕ್ತಿಗಳನ್ನು ಮತ್ತು ಗುಂಪುಗಳನ್ನು ಪ್ರತಿಬಂಧಿಸುವುದರಿಂದ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಹಾಯಕವಾಗುತ್ತದೆ ಮತ್ತು ಬೆಂಗಳೂರು ನಗರದ ನಾಗರಿಕರು ತಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಚಲಾಯಿಸಲು ಅನುವಾಗುವ ಹಾಗೆ ಮತ್ತು ಸಾರ್ವಜನಿಕ ಆಸ್ತಿಗಳಿಗೆ ಸಂಭವನೀಯ ಹಾನಿಯನ್ನು ತಡೆಗಟ್ಟುವ ಸಲುವಾಗಿಯೇ ಮುಂಜಾಗ್ರತೆಯಾಗಿದಿನಾಂಕ: 19.12.2019 ರ ಬೆಳಗ್ಗೆ 6 ಗಂಟೆಯಿಂದ 21.12.2019 ರ ಮುಂಜಾನೆ 12 ಗಂಟೆಯವರೆಗೆ ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಕೋರಲಾಗಿದೆ.

ಆದುದರಿಂದ, 19.12.2019 ರ ಬೆಳಗ್ಗೆ 6 ಗಂಟೆಯಿಂದ 21.12.2019 ರ ಮುಂಜಾನೆ 12 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯೊಳಗೆ ಸಾರ್ವಜನಿಕರ ಶಾಂತಿ ಮತ್ತು ಕ್ಷೇಮಕ್ಕೆ ಮತ್ತು ಕಾನೂನು ಹಾಗೂ ಸುವ್ಯವಸ್ಥೆಯನ್ನು ನಿರ್ವಹಿಸುವುದಕ್ಕೆ ಬಾಧಕವಾಗುವಂತಹ ಆ ಯಾವುದೇ ಘಟನೆಗಳನ್ನು ತಪ್ಪಿಸಲು, ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ನ ವ್ಯಾಪ್ತಿಯೊಳಗೆ ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿನ ನಿರ್ಬಂಧಕಾಜ್ಞೆಯನ್ನು ವಿಧಿಸುವುದು ಯುಕ್ತವೆಂದು ಪರಿಗಣಿಸಲಾಗಿದೆ.

ಆದೇಶ ಸಂ.ಎಸ್ಬಿ/ಜಿಯು.ವಿಎ/ನಿಷೇಧ/50/2019ದಿನಾಂಕ: 18.12.2019

ಈ ಸಂಬಂಧದಲ್ಲಿ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವಿಭಾಗ ವ್ಯಾಪ್ತಿಯೊಳಗೆ ಭಾಸ್ಕರ್ರಾವ್, ಐಪಿಎಸ್ ಬೆಂಗಳೂರು ನಗರದ ಪೊಲೀಸ್ ಆಯುಕ್ತನಾದ ನಾನು, ಮೇಲೆ ಹೇಳಲಾದ ಕಾರಣಗಳೊಂದಿಗೆ, ಆ ಎಲ್ಲ ಅಂಶಗಳ ಆಧಾರದ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ನನಗೆ ವಿಹಿತಗೊಳಿಸಲಾದ ಅಧಿಕಾರಗಳನ್ನು ಚಲಾಯಿಸಿ, ಬೆಂಗಳೂರು ನಗರ ವ್ಯಾಪ್ತಿಯೊಳಗೆ 19.12.2019 ರ ಬೆಳಗ್ಗೆ 6 ಗಂಟೆಯಿಂದ 21.12.2019 ರ ಮುಂಜಾನೆ 12 ಗಂಟೆಯವರೆಗೆ ಈ ಮುಂದಿನ ನಿರ್ಬಂಧಗಳನ್ನು ವಿಧಿಸಿ ಆದೇಶವನ್ನು ಹೊರಡಿಸುತ್ತೇನೆ.

1. ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಗುಂಪುಗೂಡುವುದು;

2. ಯಾವುದೇ ರೀತಿಯ ಆಚರಣೆ, ಸಾರ್ವಜನಿಕ ಪ್ರದರ್ಶನ, ಪ್ರತಿಭಟನೆ, ಜಾಥಾ, ಮುಷ್ಕರ, ರಾಸ್ತಾ ರೊಕೊ, ಸಾರ್ವಜನಿಕ| ರಾಜಕೀಯ ಸಭೆಗಳ, ಸಮಾರಂಭಗಳ ಆಯೋಜನೆ;

3. ದೈಹಿಕವಾಗಿ ಹಾನಿಯುಂಟು ಮಾಡಬಹುದಾದ ಆಯುಧಗಳು, ಕಬ್ಬಿಣದ ರಾಡ್ 9, ಮರದ ತುಂಡುಗಳು, ಕತ್ತಿಗಳು, ಇಟ್ಟಿಗೆಗಳು, ಮೋಟು ದೊಣ್ಣೆ/ದಾಂಡು, ಕಲ್ಲುಗಳು, ಚಾಕು-ಚೂರಿಗಳು, ಬಂದೂಕುಗಳು, ಮಚ್ಚುಗಳು, ಅಥವಾ ಯಾವುದೇ ರೀತಿಯ ಅಪಾಯಕಾರಿ ಆಯುಧಗಳು ಅಥವಾ ಆ ರೀತಿಯ ಯಾವುದೇ ವಸ್ತುಗಳನ್ನು ಒಯ್ಯುವುದು;

4. ಯಾವುದೇ ಸ್ಫೋಟಕ ವಸ್ತುಗಳು, ಕಲ್ಲುಗಳು, ಯಾವುದೇ ಸಲಕರಣೆಗಳನ್ನು ಸ್ಫೋಟಿಸುವುದು ಅಥವಾ ಕ್ಷಿಪಣಿಗಳನ್ನು ಉಡಾಯಿಸುವುದು ಅಥವಾ ಯಾವುದೇ ಸಲಕರಣೆಗಳನ್ನು ಒಯ್ಯುವುದು ಅಥವಾ ದಾಸ್ತಾನು ಮಾಡುವುದು;

5. ಯಾರೇ ವ್ಯಕ್ತಿ ಅಥವಾ ಆತನ ಅಣಕು ಕಳೇಬರ/ಶವಯಾತ್ರೆ ಅಥವಾ ಅವರ ಪ್ರತಿಕೃತಿ ಅಥವಾ ಭಾವಚಿತ್ರಗಳ ಪ್ರದರ್ಶನ;

6. ಸಭ್ಯತೆಗೆ ಅಥವಾ ನೈತಿಕತೆಗೆ ಬಾಧಕವುಂಟು ಮಾಡುವ ಸಾರ್ವಜನಿಕ ಸುವ್ಯವಸ್ಥೆಗೆ ತೊಂದರೆಯನ್ನುಂಟು ಮಾಡುವ ಅಥವಾ ರಾಜ್ಯದ ಭದ್ರತೆಗೆ ಅಪಾಯವುಂಟು ಮಾಡುವಂತಹ ಅಥವಾ ರಾಜ್ಯದ ಭದ್ರತೆಯನ್ನು ಕಡೆಗಣಿಸುವ ಅಥವಾ ಯಾವುದೇ ಅಪರಾಧ ಪ್ರಚೋದಿಸುವ ಯಾವುದೇ ಸಾರ್ವಜನಿಕ ಘೋಷಣೆ ಅಥವಾ ಸಾರ್ವಜನಿಕರನ್ನು ಉದ್ರೇಕಿಸುವಂತಹ ಹಾಡುಗಳನ್ನು ಹಾಡಲು, ಸಂಗೀತವನ್ನು ನುಡಿಸಲು, ತೀವ್ರತರವಾದ ಉದ್ರೇಕ ಭಾಷಣಗಳನ್ನು ಮತ್ತು ಉದ್ರೇಕಕಾರಿ ಚಿತ್ರ, ಸಂಕೇತ ಅಥವಾ ಯಾವುದೇ ಇತರ ಅಂಶಗಳ ಪ್ರಕಟಣೆಗಳನ್ನು ಪ್ರದರ್ಶನ ಮಾಡಲು ಅಥವಾ ಪ್ರಸರಣ ಮಾಡಲು ಯತ್ನಿಸುವಂತಹ ಎಲ್ಲಾ ಅಂಶಗಳು;

7. ಈ ಅವಧಿಯಲ್ಲಿ ಈಗಾಗಲೇ ಯಾವುದೇ ಪ್ರತಿಭಟನೆಗಾಗಿ ನೀಡಲಾದ ಎಲ್ಲ ಅನುಮತಿಗಳು ರದ್ದಾಗುತ್ತವೆ. "(ಒತ್ತು ನೀಡಲಾಗಿದೆ)

ಮೇಲಿನ ನಾಲ್ಕು ಪ್ಯಾರಾಗಳು ಪ್ರಶ್ನಿತ ಆದೇಶದ ಮುಖ್ಯ ಭಾಗವಾಗಿದೆ.ಮೊದಲ ಪ್ಯಾರಾದಲ್ಲಿ ನಗರದ ವಿವಿಧ ವಿಭಾಗದ ಪೊಲೀಸ್ ಉಪ ಆಯುಕ್ತರುಗಳ ವರದಿಗಳನ್ನು ಉಲ್ಲೇಖಿಸಲಾಗಿದೆ.ಮೊದಲ ಪ್ಯಾರಾದಲ್ಲಿ, ವರದಿಗಳಲ್ಲಿ ಕೆಲವು ಅಂಶಗಳನ್ನು ನಮೂದಿಸಲಾಗಿದ್ದು, ಅವುಗಳನ್ನು ತರುವಾಯದ ಎರಡು ಪ್ಯಾರಾದಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗಿದೆ.

18. ಪೊಲೀಸ್ ಉಪ ಆಯುಕ್ತರು ತಮ್ಮ ವರದಿಗಳಲ್ಲಿ/ಪತ್ರಗಳಲ್ಲಿ ನಮೂದಿಸಿದ ಅಂಶಗಳನ್ನು ಮು ೦ ದಿನ ಎರಡು ಪ್ಯಾರಾದಲ್ಲಿ ದಾಖಲುಗೊಂಡಿದೆ.ಮಾನ್ಯ ಅಡ್ವಕೇಟ್ ಜನರಲ್ ಅವರು ಎರಡನೇ ಮತ್ತು ಮೂರನೇ ಪ್ಯಾರಾಗಳಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಅಭಿಪ್ರಾಯದ ಅಂಶಗಳನ್ನೂ ಒಳಗೊಂಡಿವೆ ಎಂದು ವಾದಿಸಲು ಪ್ರಯತ್ನಿಸಿದರೂ, ಈ ಮುಂದಿನ ಎರಡು ಪ್ಯಾರಾಗಳಲ್ಲಿ ಏನನ್ನೂ ಮತ್ತೆ ಮಂಡಿಸಲಾಗಿದೆಯೋ ಅದೇ ಅಂಶಗಳು ಪೊಲೀಸ್ ಉಪ-ಆಯುಕ್ತರಿಂದ ಸ್ವೀಕರಿಸಿದ ಪತ್ರಗಳು/ವರದಿಗಳ ಅಂಶಗಳೂ ಆಗಿವೆ ಎಂಬುದು ಒಂದನೇ ಪ್ಯಾರಾದಿಂದ ಸ್ಪಷ್ಟವಾಗುತ್ತದೆ.ಪೊಲೀಸ್ ಉಪ ಆಯುಕ್ತರ ವರದಿಗಳಲ್ಲಿ ಏನು ಕಂಡುಬಂದಿದೆಯೋ ಅದೇ ಅಂಶಗಳನ್ನು ಎರಡನೇ ಮತ್ತು 3 ನೇ ಪ್ಯಾರಾದಲ್ಲಿ ಮರು ಮಂಡಿಸಲಾಗಿದೆಯೇ ಹೊರತು ಬೇರೆ ಅಂಶಗಳು ಇಲ್ಲ. ಮೂರನೇ ಪ್ಯಾರಾದಲ್ಲಿನ ಕೊನೆಯ ಭಾಗದಲ್ಲಿ ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪೊಲೀಸ್ ಉಪ ಆಯುಕ್ತರು ಸೌಮ್ಯ ಆರ್. ರೆಡ್ಡಿ -ವಿರುದ್ಧ ಕರ್ನಾಟಕ ಸರ್ಕಾರ, ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು ಮನವಿ ಮಾಡಿಕೊಂಡಿದ್ದ ಅಂಶವನ್ನು ಗಮನಿಸಬಹುದು.ಕೊನೆಯ ಪ್ಯಾರಾದಲ್ಲಿ ಮೇಲಿನ ಮುಖ್ಯ ಭಾಗದಲ್ಲಿ ಆಯುಕ್ತರು/ಜಿಲ್ಲಾ ಮ್ಯಾಜಿಸ್ಟ್ರೇಟರು ಯಾವುದೇ ಮುಖ್ಯ ಸಂಗತಿಗಳನ್ನು ಹೇಳಿರುವುದಿಲ್ಲ.ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣವನ್ನು ಹೀಗೆ ಉಪಬಂಧಿಸಲಾಗಿದೆ:

"144. ಉಪದ್ರವದ ಅಥವಾ ಶಂಕಿತ ಅಪಾಯದ ಜರೂರು ಸಂದರ್ಭಗಳಲ್ಲಿ ಆದೇಶ ಹೊರಡಿಸುವ ಅಧಿಕಾರ.- ( 1) ಜಿಲ್ಲಾ ಮ್ಯಾಜಿಸ್ಟ್ರೇಟನು, ಉಪವಿಭಾಗದ ಮ್ಯಾಜಿಸ್ಟ್ರೇಟನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾದ ಇತರೆ ಯಾರೇ ಕಾರ್ಯಾಂಗ ಮ್ಯಾಜಿಸ್ಟ್ರೇಟನು ಈ ಪ್ರಕರಣದ ಮೇರೆಗೆ ಕ್ರಮ ಜರುಗಿಸಲು ಸಾಕಷ್ಟು ಕಾರಣವಿದೆಯೆಂದು ಮತ್ತು ಜರೂರು ನಿರೋಧ ಆಥವಾ ತುರ್ತು ಪರಿಹಾರೋಪಾಯವು ಅಪೇಕ್ಷಿತವೆಂದು ಅಭಿಪ್ರಾಯ ಪಡುವ ಸಂದರ್ಭಗಳಲ್ಲಿ, ಅಂಥ ಮ್ಯಾಜಿಸ್ಟ್ರೇಟನು ವಿಧಿಬದ್ಧವಾಗಿ ನಿಯೋಜಿತನಾದ ಯಾರೇ ವ್ಯಕ್ತಿಗೆ ಆಗುವ ಅಡಚಣೆ, ಕಿರುಕುಳ ಅಥವಾ ಕೃತಿಯನ್ನು ಅಥವಾ ಮನುಷ್ಯನ ಜೀವ, ಆರೋಗ್ಯ ಅಥವಾ ಸಂರಕ್ಷಣೆಗೆ ಉಂಟಾಗುವ ಅಪಾಯವನ್ನು ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟವನ್ನು ನಿರ್ದೇಶನವು ನಿರೋಧಿಸುವ ಸಂಭವವಿದೆಯೆಂದು ಅಥವಾ ನಿರೋಧಿಸಲು ನೆರವಾಗುವುದೆಂದು ಪರ್ಯಾಲೋಚಿಸಿದರೆ, ಆ ಸಂದರ್ಭದ ಮುಖ್ಯ ಸಂಗತಿಗಳನ್ನು ಉಲ್ಲೇಖಿಸುವ ಮತ್ತು 134 ನೇ ಪ್ರಕರಣದಲ್ಲಿ ಉಪಬಂಧಿತವಾದ ರೀತಿಯಲ್ಲಿ ಜಾರಿಗೊಳಿಸಲಾದ ಲಿಖಿತ ಆದೇಶದ ಮೂಲಕ ಯಾರೇ ವ್ಯಕ್ತಿಯ ನಿರ್ದಿಷ್ಟ ಕೃತ್ಯವನ್ನು ಮಾಡದಿರುವಂತೆ ಅಥವಾ ಅವನ ಸ್ವಾಧೀನದಲ್ಲಿರುವ ಅಥವಾ ಅವನ ಆಡಳಿತದಲ್ಲಿರುವ ನಿರ್ದಿಷ್ಟ ಸ್ವತ್ತಿನ ಬಗ್ಗೆ ನಿರ್ದಿಷ್ಟ ವ್ಯವಸ್ಥೆ ಮಾಡುವಂತೆ, ಆ ಮ್ಯಾಜಿಸ್ಟ್ರೇಟನು ಅಂಥ ನಿರ್ದೇಶನವನ್ನು ಮಾಡಬಹುದು.(ಒತ್ತು ನೀಡಲಾಗಿದೆ) ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರಶ್ನಿತ ಆದೇಶದಲ್ಲಿ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ ಯಾವುದೇ ಅಭಿಪ್ರಾಯದ ಮಾಹಿತಿಯನ್ನು ದಾಖಲಿಸಿರುವುದಿಲ್ಲ.ಜಿಲ್ಲಾ ಮ್ಯಾಜಿಸ್ಟ್ರೇಟರು, ಸಾರ್ವಜನಿಕ ಶಾಂತಿ, ಕ್ಷೇಮ ಮತ್ತು ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸುವುದಕ್ಕೆ ಬಾಧಕವಾಗುವಂತಹ ಆ ಯಾವುದೇ ಘಟನೆಗಳನ್ನು ತಪ್ಪಿಸಲು ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ನಿರ್ಬಂಧಕಾಜ್ಞೆಯನ್ನು ವಿಧಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ ಎಂದು ಮಾತ್ರ ಹೇಳಿರುವರು.ಇದಕ್ಕೆ ಪೂರಕವಾಗಿ ಅವರು ಮುಖ್ಯ ಸಂಗತಿಗಳ ಬಗ್ಗೆ ಹೇಳಿರುವುದಿಲ್ಲ.ಮುಖ್ಯ ಭಾಗದಲ್ಲಿ, ಅವರು " ಮೇಲೆ ಹೇಳಲಾದ ಕಾರಣಗಳೊಂದಿಗೆ ಅದರ ಅಂಶಗಳನ್ನು ಅವಲಂಬಿಸಲಾಗಿದೆ " ಎಂದಷ್ಟೇ ಹೇಳಿರುವರು.ಪೊಲೀಸ್ ಉಪ ಆಯುಕ್ತರು ತಮ್ಮ ವರದಿಗಳಲ್ಲಿ ಏನು ಹೇಳಿರುವರೋ ಆ ಅಂಶಗಳ ಹೊರತಾಗಿ, ಮುಖ್ಯ ಭಾಗದ ಮೇಲಿನ ನಾಲ್ಕು ಪ್ಯಾರಾಗಳಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರು ತಾವೇ ಸ್ವತಃ ಯಾವುದೇ ಕಾರಣಗಳನ್ನು ದಾಖಲಿಸಿರುವುದು ನಮಗೆ ಕಂಡುಬರುವುದಿಲ್ಲ.ಜಿಲ್ಲಾ ಮ್ಯಾಜಿಸ್ಟ್ರೇಟರು, ವಿಚಾರಣೆಯ ತರುವಾಯ, ಉಪ ಆಯುಕ್ತರು ಸಲ್ಲಿಸಿದ ವರದಿಗಳ ಅಂಶಗಳು ಸರಿಯಾಗಿದೆ ಎಂದೂ ತಮಗೆ ಕಂಡುಬಂದಿದೆಯೆಂದೂ ಸಹ ಮ್ಯಾಜಿಸ್ಟ್ರೇಟರು ಹೇಳಿರುವುದಿಲ್ಲ.

19. ಈ ವಾಸ್ತವಿಕ ಅಂಶಗಳ ಹಿನ್ನೆಲೆಯಲ್ಲಿ, ಈಗ ನಾವು ಸರ್ವೋಚ್ಚ ಚ ನ್ಯಾಯಾಲಯವು ರಾಮಲೀಲ ಮೈದಾನ್ (ಮೇಲಿನ) ಮೊಕದ್ದಮೆಯಲ್ಲಿ ಮೊದಲು ಮಂಡಿಸಿದ ಕಾನೂನುಗಳನ್ನು ಪ್ರಸ್ತಾಪಿಸಬೇಕು.ಸರ್ವೋಚ್ಚ ನ್ಯಾಯಾಲಯವು, ಚ ಬಾಬುಲಾಲ್ ಪರಾಟೆ -ವಿರುದ್ಧ ಮಹಾರಾಷ್ಟ್ರ ಸರ್ಕಾರ್ ಮತ್ತು ಮಧು ಅಮಯೆ -ವಿರುದ್ಧ-ಉಪ ವಿಭಾಗೀಯ ಮ್ಯಾಜಿಸ್ಟ್ರೇಟರು, ಮಾಂಗ್ಯೆರ್ ಮತ್ತು ಇತರರು

ಮೊಕದ್ದಮೆಯಲ್ಲಿ ತನ್ನ ಹಿಂದಿನ ನಿರ್ಣಯಗಳನ್ನು ಉಲ್ಲೇಖಿಸಿದೆ.ರಾಮಲೀಲಾ ಮೈದಾನದ ಮೊಕದ್ದಮೆಯ ನಿರ್ಣಯದ 56 ನೇ ಪ್ಯಾರಾವನ್ನು ಈ ಮುಂದಿನಂತೆ ಓದಿಕೊಳ್ಳುವುದು:

6. ಎಐಆರ್ 1961 ಎಸ್ಸಿ 884

7. (1973) 3 ಎಸ್ಸಿಸಿ 746

" 56 ಇದಲ್ಲದೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರದ ಹಕ್ಕು ಹಾಗೂ ಶಾಂತಿಯುತವಾಗಿ ಸಭೆ ಸೇರುವ ಹಕ್ಕುಗಳ ಮೇಲೆ ನಿರ್ಬಂಧ ವಿಧಿಸುವ ನೇರ ಪರಿಣಾಮವನ್ನು ಹೊಂದಿರುವ ಆದೇಶವಾಗಿರುವ ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿನ ಆದೇಶವು ಲಿಖಿತದಲ್ಲಿರುವ ಮತ್ತು ಮೊಕದ್ದಮೆಯ ಮುಖ್ಯ ಸಂಗತಿಗಳನ್ನಾಧರಿಸಿದ ಆದೇಶವಾಗಿರತಕ್ಕದ್ದು.ಒಂದಕ್ಕಿಂತ ಹೆಚ್ಚಿನ ಕಾರಣಗಳಿಗಾಗಿ ಇದು ಕಾನೂನಿನ ಅಗತ್ಯವಾಗುತ್ತದೆ.ಮೊದಲನೆಯದಾಗಿ, ಇದು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧಗಳನ್ನು ಹೇರುವ ಆದೇಶವಾಗಿದೆ.ಹಾಗಾಗಿ ಇದು ಪಕ್ಷಕಾರರ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ.ಎರಡನೆಯದಾಗಿ, ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಅಂಥ ಆದೇಶವು ಪರಿಷ್ಕರಣೆಗೆ ಅರ್ಹವಾಗಿದೆ ಮತ್ತು ನ್ಯಾಯಿಕ ಪುನರೀಕ್ಷಣೆಗೆ ಒಳಪಟ್ಟಿರುತ್ತದೆ.ಆದುದರಿಂದ, ವಾಸ್ತವಾಂಶಗಳನ್ನು ಉಲ್ಲೇಖಿಸಿ ಮತ್ತು ಅಂಥ ನಿರ್ಬಂಧನೆಗಳನ್ನು ಹೇರುವುದಕ್ಕೆ ಸಂಬಂಧಿಸಿದ ಕಾರಣಗಳನ್ನು ತಿಳಿಸಿ ಅಂಥ ಆದೇಶವನ್ನು ಅಂತದಲ್ಲಿ ಸಲ್ಲಿಸುವುದು ಸಮುಚಿತ ಕ್ರಮವಾಗಿರುತ್ತದೆ.ಪ್ರವೀಣ್ ಬಾಯಿ ತೊಗಾಡಿಯಾ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಅಂಥ ಆದೇಶಗಳ ಬಗ್ಗೆ ವ್ಯವಹರಿಸುವಾಗ, ನ್ಯಾಯಾಲಯವು ಸಂಬಂಧಪಟ್ಟ ಅಧಿಕಾರಿಯ ನಿರ್ಣಯದ ಮೇಲೆ ಅಪೀಲು ಪ್ರಾಧಿಕಾರದಂತೆ ವರ್ತಿಸಬಾರದು ಎಂಬ ಅಭಿಪ್ರಾಯವನ್ನು ತಳೆದಿರುತ್ತದೆ.ಆದೇಶವು ಸ್ಪಷ್ಟವಾಗಿ ಕಾನೂನುಬಾಹಿರವಾಗಿದ್ದರೆ ಮತ್ತು ಅಧಿಕಾರ ವ್ಯಾಪ್ತಿಯ ಹೊರತಾಗಿದ್ದರೆ ಅಥವಾ ಗುಪ್ತ ಉದ್ದೇಶದಿಂದ ಕೂಡಿದ್ದರೆ ಮತ್ತು ಅಧಿಕಾರದಲ್ಲಿರುವವರು ರಾಜಕೀಯ ಬಲಿಪಶುಗಳನ್ನಾಗಿ ಮಾಡುವ ಅಪ್ರಸ್ತುತ ಪರಿಗಣನೆಯ ಉದ್ದೇಶವನ್ನಿಟ್ಟುಕೊಂಡಿದ್ದಾಗ ಮಾತ್ರವೇ, ಅದು ಹಸ್ತಕ್ಷೇಪ ಮಾಡುತ್ತದೆ.ಸಾಮಾನ್ಯವಾಗಿ ಹಸ್ತಕ್ಷೇಪವು ಅಪವಾದವಾಗಿರಬೇಕೇ ವಿನಾ ನಿಯಮವಾಗಿರತಕ್ಕದ್ದಲ್ಲ. (ಒತ್ತು ನೀಡಲಾಗಿದೆ)

20. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯವು ಅಂಥ ನಿಷೇದಾಜ್ಞೆಯು ಲಿಖಿತದಲ್ಲಿರಬೇಕು ಮತ್ತು ವಾಸ್ತವ ಸಂಗತಿಗಳನ್ನು ಉಲ್ಲೇಖಿಸಿರಬೇಕು ಎಂದು ಸ್ಪಷ್ಟವಾಗಿ ಹೇಳಿದೆ.ಅಂಥ ನಿರ್ಬಂಧಕಾಜ್ಞೆಯನ್ನು ವಿಧಿಸುವುದಕ್ಕಾಗಿ ಕಾರಣಗಳನ್ನು ದಾಖಲಿಸಬೇಕು.ಮಾನ್ಯ ಅಡ್ವಕೇಟ್ ಜನರಲ್ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬನೆಯಾಗಿ ನೀಡಿದ್ದು, ಅದರ 84 ನೇ ಪ್ಯಾರಾದಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ.

"84. ಈ ಸಂಬಂಧದಲ್ಲಿ ಪೊಲೀಸರ ಪರವಾಗಿ ಸಲ್ಲಿಸಿದ ಅಫಿಡಾವಿಟ್ಗಳು ಮತ್ತು ಗೃಹ ವ್ಯವಹಾರಗಳ ಮಂತ್ರಾಲಯವು ದಾಖಲಿಸಿದ ಅಫಿಡಾವಿಟ್ಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡುಬಂದಿದೆ.ಈ ವ್ಯತ್ಯಾಸಗಳು, ಈ ನ್ಯಾಯಾಲಯವು ಅಫಿಡಾವಿಟ್ಗಳು ಸುಳ್ಳಿನಿಂದ ಕೂಡಿವೆ ಮತ್ತು ಅಥವಾ ಸಂಪೂರ್ಣವಾಗಿ ತಪ್ಪಾಗಿವೆ ಎಂಬ ನಿರ್ಣಯಕ್ಕೆ ಈ ನ್ಯಾಯಾಲಯವು ಬರಲು ಸಾಧ್ಯವಾಗುವಂತಹ ಸ್ವರೂಪದಲ್ಲಿರುವುದಿಲ್ಲ.ದೆಹಲಿಯಂತಹ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸುವುದು ಸುಲಭವಾದ ಕೆಲಸವಾಗಿರುವುದಿಲ್ಲ ಎಂಬ ಸಂಗತಿಯನ್ನು ಈ ನ್ಯಾಯಾಲಯವು ಕಡೆಗಣಿಸಬಾರದು.ಕೆಲವು ಯುಕ್ತ ಕಾರಣಗಳಿಗಾಗಿ ಮತ್ತು ಕಾನೂನಿನ ಚೌಕಟ್ಟಿನೊಳಗೆ ಸಕ್ಷಮ ಪ್ರಾಧಿಕಾರಗಳು ಕೆಲವು ಟೀಕೆಗಳಿಗೆ ಕಾರಣವಾಗುವಂತಹ ಹಲವಾರು ಮುಖ್ಯವಾದ ಮತ್ತು ಮಹತ್ವ ಪೂರ್ಣವಾದ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ.ಅಂಥ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರಾಧಿಕಾರವು ವ್ಯಕ್ತಿನಿಷ್ಠವಾಗಿದ್ದರೂ, ಹಾಗೂ ಈ ರೀತಿಯ ವ್ಯಕ್ತಿನಿಷ್ಠ ಮನವರಿಕೆಯೂ ವಸ್ತುನಿಷ್ಠವಾಗಿಯೇ ಬರಬೇಕಾಗುತ್ತದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಸುಸಂಗತ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ಈ ವ್ಯಕ್ತಿನಿಷ್ಠ ನಿರ್ಣಯದಿಂದ ವಸ್ತುನಿಷ್ಠ ನಿರ್ಣಯಕ್ಕೆ ಬರಬೇಕಾಗುತ್ತದೆ.ಅಂಥ ನಿರ್ಣಯಗಳನ್ನು ಮಾಡುವ ಪ್ರಾಧಿಕಾರಕ್ಕೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಅಥವಾ ನಿಯಂತ್ರಣವನ್ನು ನೀಡಬೇಕಾಗುತ್ತದೆ.ಸಾಮಾನ್ಯವಾಗಿ ನ್ಯಾಯಾಲಯಗಳು ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನಿಯಂತ್ರಿತ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಹೇಳಲಾದ ಮಾನದಂಡಗಳಿಗೆ ಅನುಗುಣವಾಗಿಲ್ಲದ ಹೊರತು ಅಂಥ ಅಧಿಕಾರವನ್ನು ಚಲಾಯಿಸುವಲ್ಲಿ ಹಸ್ತಕ್ಷೇಪ ಮಾಡಲು ಇಚ್ಛಿಸುವುದಿಲ್ಲ.(ಒತ್ತು ನೀಡಲಾಗಿದೆ)

21. ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ ಪ್ರಕರಣದ ಅಡಿಯಲ್ಲಿ ದಾಖಲಿಸಬೇಕೆಂದು ಅಗತ್ಯಪಡಿಸಿದ ಯಥೋಚಿತತೆಯು ವ್ಯಕ್ತಿ ನಿಷ್ಠವಾಗಿರ ಬಹುದಾದರೂ, ಸದರಿ ಸ ಂ ಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತಹ ಸುಸಂಗತ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ಅದನ್ನು ವಸ್ತುನಿಷ್ಠವಾಗಿರಬೇಕಾಗುತ್ತದೆ.

22. ವಿಷಯದ ಮೇಲಿನ ಇಡೀ ಕಾನೂನನ್ನು, ಅನುರಾಧ ಭಾಸಿನ್ (ಮೇಅನ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಇತ್ತೀಚಿನ ನಿರ್ಣಯದಲ್ಲಿ ಚ ಸಂಕ್ಷಿಪ್ತಗೊಳಿಸಲಾಗಿದೆ.ಅದರ 70 ನೇ ಪ್ಯಾರಾದಲ್ಲಿ, ಅದು ರಾಜ್ಯವು ಸಾಮಾನ್ಯವಾಗಿ ಕನಿಷ್ಠ ನಿರ್ಬಂಧನಾ ಕ್ರಮಗಳನ್ನು ಆಶ್ರಯಿಸತಕ್ಕದ್ದು ಎಂದು ಹೇಳಿದೆ.ಮುಂದುವರೆದು, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶಕ್ಕೆ ಸಮಾನುಪಾತತೆ ಸಿದ್ಧಾಂತವನ್ನು ಅನ್ವಯಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ.ಮೂರನೆಯದಾಗಿ, ಅದು ತುರ್ತು ಸನ್ನಿವೇಶಗಳಲ್ಲಿ ಮತ್ತು ನಿರೀಕ್ಷಿತ ಅಪಾಯದ ಸಂದರ್ಭಗಳಲ್ಲಿ ಮಾತ್ರವೇ ಈ ಅಧಿಕಾರವನ್ನು ಚಲಾಯಿಸಬಹುದೆಂದು ಅಭಿಪ್ರಾಯಪಟ್ಟಿರುತ್ತದೆ.108 ನೇ ಪ್ಯಾರಾವು ಹೆಚ್ಚು ಪ್ರಸ್ತುತವಾಗಿದೆ.108 ನೇ ಪ್ಯಾರಾ ( ಎ) ಮತ್ತು (ಬಿ) ಖಂಡಗಳನ್ನು ಕೆಳಗಿನಂತೆ ಓದಿಕೊಳ್ಳುವುದು:

“108. ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದಲ್ಲಿ ಮೇಲೆ ಹೇಳಲಾದ ಸಂರಕ್ಷಣೆಗಳನ್ನು ಕೆಳಗಿನಂತೆ ಚರ್ಚಿಸಲಾಗಿದೆ ಮತ್ತು ಅದು ನಿಕಟ ಪರಿಶೀಲನೆಗೆ ಅರ್ಹವಾಗಿದೆ.

(ಎ) ಆದೇಶವನ್ನು ಜಾರಿಗೊಳಿಸುವ ಮುಂಚೆ ಪೂರ್ವ ವಿಚಾರಣೆ:ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಅ ಆದೇಶವನ್ನು ಜಾರಿ ಮಾಡುವ ಮುಂಚೆ, ಜಿಲ್ಲಾ ಮ್ಯಾಜಿಸ್ಟ್ರೇಟರು (ಯಾರೇ ಅಧಿಕೃತ ಮ್ಯಾಜಿಸ್ಟ್ರೇಟರು) ಈ ಮುಂದಿನಂತೆ ಅಭಿಪ್ರಾಯವನ್ನು ಹೊಂದಿರಬೇಕು, ಎಂದರೆ:

(i) ಈ ಉಪಬಂಧಗಳ ಅಡಿಯಲ್ಲಿ ವ್ಯವಹರಿಸುವುದಕ್ಕಾಗಿ ಸಾಕಷ್ಟು ಕಾರಣಗಳಿವೆ ಎಂದರೆ ಕಾನೂನುಬದ್ಧವಾಗಿ ನಿಯೋಜಿತವಾದ ಯಾರೇ ವ್ಯಕ್ತಿಗೆ ಅಡ್ಡಿ ಪಡಿಸುವ, ಕಿರುಕುಳ ಅಥವಾ ಹಾನಿಯನ್ನು ಉಂಟು ಮಾಡುವ ಅಥವಾ ಮಾನವ ಬದುಕಿಗೆ, ಆರೋಗ್ಯಕ್ಕೆ ಅಥವಾ ಸುರಕ್ಷತೆಗೆ ಹಾನಿಯುಂಟು ಮಾಡುವ ಅಥವಾ ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟು ಮಾಡುವಂತಹ ಸನ್ನಿವೇಶಗಳನ್ನು ತಪ್ಪಿಸುವ ಉದ್ದೇಶಕ್ಕೆ ಆದೇಶಿಸಲಾಗಿದೆ ಎಂಬ ಕಾರಣಗಳನ್ನು ಒಳಗೊಂಡಿರಬೇಕು; ಮತ್ತು

(ii) ತತ್ಕ್ಷಣದ ನಿರ್ಬಂಧನೆ ಅಥವಾ ತುರ್ತು ಪರಿಹಾರಗಳು ಅಪೇಕ್ಷಣೀಯವಾಗಿವೆ

“ಅಭಿಪ್ರಾಯ ” ಎಂಬ ಪದವು, ಈ ಉಪಬಂಧಗಳ ಅಡಿಯಲ್ಲಿ ಪ್ರದತ್ತವಾದ ವಿಶೇಷ ಅಧಿಕಾರವನ್ನು ಚಲಾಯಿಸುವ ಅಗತ್ಯತೆಯ ಬಗ್ಗೆ ಮ್ಯಾಜಿಸ್ಟ್ರೇಟರು ಜಾಗರೂಕತೆಯಿಂದ ವಿಚಾರಣೆ ಮಾಡಿದ ತರುವಾಯ ನಿರ್ಣಯಕ್ಕೆ ಬರಬೇಕು ಎಂಬ ಅರ್ಥವನ್ನು ಧ್ವನಿಸುತ್ತದೆ.

(ಬಿ) ಆದೇಶದ ವಿಷಯ:ಮ್ಯಾಜಿಸ್ಟ್ರೇಟರು ಒಮ್ಮೆ ಒಂದು ಅಭಿಪ್ರಾಯಕ್ಕೆ ಬಂದರೆ, ಅವನು ಒಬ್ಬ ವ್ಯಕ್ತಿಯನ್ನು ಏನಾದರೂ ಕಾರ್ಯ ಮಾಡುವುದರಿಂದ ನಿಷೇಧಿಸಿ ಲಿಖಿತ ಆದೇಶವನ್ನು ಅಥವಾ ಒಬ್ಬ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ಅವನು ನಿರ್ವಹಣೆಯಲ್ಲಿ ಆಸ್ತಿಯ ಸಂಬಂಧದಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅವನನ್ನು ಅಗತ್ಯಪಡಿಸಿ ಆಜ್ಞಾಪಕ ಆದೇಶವನ್ನು ಹೊರಡಿಸಬಹುದು.ಆದರೆ ಆ ಆದೇಶವು ಸರ್ವ ವ್ಯಾಪಕ ಆದೇಶವಾಗಿರುವಂತಿಲ್ಲ.ಅದು ಮೊಕದ್ದಮೆಯ “ ಮುಖ್ಯ ಸಂಗತಿಗಳನ್ನು 99 ” ನಿಶ್ಚಯಿಸಬೇಕು.” ಮುಖ್ಯ ಸಂಗತಿಗಳು " ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಆದೇಶವನ್ನು ಜಾರಿ ಮಾಡುವುದಕ್ಕೆ ಮ್ಯಾಜಿಸ್ಟ್ರೇಟರು ಮಹತ್ವದೆಂದು ಪರಿಗಣಿಸುವ ಕಾರಣಗಳನ್ನು ಸೂಚಿಸಬೇಕು '

23. ಹೀಗಾಗಿ, 108 ನೇ ಪ್ಯಾರಾದ ( ಎ) ಖಂಡದಲ್ಲಿ ಹೇಳಿರುವಂತೆ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟವಾಗಿ ಅಭಿಪ್ರಾಯಪಡಲಾದಂತೆ, ಜಿಲ್ಲಾ ಮ್ಯಾಜಿಸ್ಟ್ರೇಟರು ಅಭಿಪ್ರಾಯವನ್ನು ರೂಪಿಸಬೇಕಾಗುತ್ತದೆ.ಕೂಡಲೇ ತಡೆಗಟ್ಟುವ ಅಗತ್ಯವಿದೆ ಎಂಬಂತೆ ಅಭಿಪ್ರಾಯವನ್ನು ರೂಪಿಸಬೇಕು.ಹೆಚ್ಚಿನ ಮಹತ್ವದ ಸಂಗತಿಯೆಂದರೆ, ಸರ್ವೋಚ್ಚ ನ್ಯಾಯಾಲಯವು “ ಅಭಿಪ್ರಾಯ ” ಎಂಬ ಪದದ ಬಳಕೆಯು, ಕೂಲಂಕಷವಾಗಿ ವಿಚಾರಣೆ ಮಾಡಿದ ತರುವಾಯ ಬರುವ ಒಂದು ತೀರ್ಮಾನ ಎಂಬುದನ್ನು

ಸೂಚಿಸುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ವಿಶೇಷ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇ ಟರು ಚಲಾಯಿಸುವುದರಿಂದ " ಕೂಲಂಕಷವಾಗಿ ವಿಚಾರಣೆ " ಯನ್ನು ಉದ್ದೇಶಿಸಲಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ." ಕೂಲಂಕಷ ವಿಚಾರಣೆ " ಎಂಬ ವಿಷಯಕ್ಕೆ ಬಂದರೆ, ರಾಜ್ಯ ಸರ್ಕಾರವು ದಾಖಲಿಸಿದ ಆಕ್ಷೇಪಣೆಗಳ ಹೇಳಿಕೆಗಳು, ಪ್ರಶ್ನಿತ ಆದೇಶವನ್ನು ಹೊರಡಿಸಿದ ಜಿಲ್ಲಾ ಮ್ಯಾಜಿಸ್ಟ್ರೇ ಟರ ಅಫಿಡಾವಿಟ್ಟಿಗೆ ಅನುಗುಣವಾಗಿಲ್ಲ.ಆದರೆ ಆದೇಶವನ್ನು ಹೊರಡಿಸಿದ ಜಿಲ್ಲಾ ಮ್ಯಾಜಿಸ್ಟ್ರೇ ಟರು " ಕೂಲಂಕಷ ವಿಚಾರಣೆ " ಯನ್ನು ನಡೆಸಿದರೇ ಎಂಬ ಬಗ್ಗೆ ವೈಯಕ್ತಿಕ ತಿಳುವಳಿಕೆ ಹೊಂದಿರದ ಪೊಲೀಸ್ ಸಹಾಯಕ ಆಯುಕ್ತರು ಸಲ್ಲಿಸಿದ ಅಫಿಡಾವಿಟ್ಟಿಗೆ ಅನುಗುಣವಾಗಿದೆ ಎಂದು ಹೇಳಬೇಕಾಗುತ್ತದೆ.ಪಶ್ನಿತ ಆದೇಶವನ್ನು ಅವಲೋಕಿಸಿದಾಗ, ಪೊಲೀಸ್ ಉಪ ಆಯುಕ್ತರು ಸಲ್ಲಿಸಿದ ವರದಿಗಳಲ್ಲಿ ಏನನ್ನು ಹೇಳಲಾಗಿದೆಯೇ ಅದರ ಯಥಾವತ್ತಾದ ನಿರೂಪಣೆಯಾಗಿರುವುದು ಕಂಡು ಬರುತ್ತದೆ.ಜಿಲ್ಲಾ ಮ್ಯಾಜಿಸ್ಟ್ರೇಟರು ಯಾವುದೇ ಹೆಚ್ಚಿನ ವಿಚಾರಣೆ ಮಾಡಿದ್ದರು ಎಂಬ ಬಗ್ಗೆ ದೂರದ ಸೂಚನೆಯು ಸಹ ಇರುವುದಿಲ್ಲ.ಮಾನ್ಯ ಅಡ್ವಕೇಟ್ ಜನರಲ್ ಅವರು ತಮ್ಮ ನಿವೇದನೆಯಲ್ಲಿ ಪೊಲೀಸ್ ಆಯುಕ್ತರೂ ಆಗಿರುವ ಜಿಲ್ಲಾ ಮ್ಯಾಜಿಸ್ಟ್ರೇಟರು, ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ನೀಡಿದ ವರದಿಯನ್ನು ನಂಬಬೇಕಾಗಿದ್ದ ಕಾರಣದಿಂದ ಯಾವುದೇ ವಿಚಾರಣೆಗೆ ಆದೇಶಿಸಿರಲಿಲ್ಲ ಎಂದು ನಿವೇದಿಸಿರುವರು.ಕೆಲವು ಪೊಲೀಸ್ ಉಪ ಆಯುಕ್ತರು ಸದರಿ ಆದೇಶದ ಉಪಬಂಧಗಳ ಅಡಿಯಲ್ಲಿ (19 ರಿಂದ 21 ನೇ ಡಿಸೆಂಬರ್, 2019) ಮೂರು ದಿನಗಳ ಕಾಲ ಪ್ರತಿಭಟನೆಯನ್ನು ನಡೆಸುವುದಕ್ಕೆ ಸ್ವತಃ ತಾವೇ ಅನುಮತಿಗಳನ್ನು ನೀಡಿದ್ದರೆಂಬುದು ಮತ್ತು ಪೊಲೀಸ್ ಆಯುಕ್ತರಿಗೆ ಸಲ್ಲಿಸಲಾದ ತಮ್ಮ ವರದಿಗಳಲ್ಲಿ ಸದರಿ ಮುಖ್ಯ ಸಂಗತಿಗಳನ್ನು ನಮೂದಿಸಿರುವುದಿಲ್ಲ ಎಂಬುದು ಒಪ್ಪಿತ ಸಂಗತಿಯಾಗಿದೆ.ಯಾವುದೇ ವಿಚಾರಣೆಯ ಅವಶ್ಯಕತೆ ಇರಲಿಲ್ಲ ಎಂಬುದು ರಾಜ್ಯ ಸರ್ಕಾರದ ನಿಲುವಾಗಿದೆ.ಇದು, ಜಿಲ್ಲಾ ಮ್ಯಾಜಿಸ್ಟ್ರೇಟರು ಯಾವುದೇ ವಿಚಾರಣೆ ನಡೆಸಲಿಲ್ಲವೆಂಬುದನ್ನು ಸೂಚಿಸುತ್ತದೆ.ಜಿಲ್ಲಾ ಮ್ಯಾಜಿಸ್ಟ್ರೇಟರು ವ್ಯಕ್ತಿನಿಷ್ಠ ನಿರ್ಣಯಕ್ಕೆ ಬರುವ ಮುಂಚೆ ತಮ್ಮದೇ ಸ್ವಂತ ವಿಚಾರಣೆ ಮಾಡುವ ಬದ್ಧತೆಗೆ ಒಳಗಾಗಿದ್ದರು.ಜಿಲ್ಲಾ ಮ್ಯಾಜಿಸ್ಟ್ರೇಟರು ಸಲ್ಲಿಸಿದ ಮಾಹಿತಿಯ ಮೂಲಗಳ ಕುರಿತು ವರದಿ ಸಲ್ಲಿಸಿದ್ದ ಉಪ ಆಯುಕ್ತರುಗಳೊಂದಿಗೆ ದೂರವಾಣಿ ಮೂಲಕ ಸಹ ಚರ್ಚಿಸಿಲ್ಲವೆಂಬುದು ರಾಜ್ಯದ ವಾದವಾಗಿರುವುದಿಲ್ಲ.ಪ್ರಶ್ನಿತ ಆದೇಶವನ್ನು ಹೊರಡಿಸುವ ಅವಶ್ಯಕತೆಯ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟರು ವ್ಯಕ್ತಿನಿಷ್ಠ ನಿರ್ಣಯಕ್ಕೆ ಬರಲು ಸ್ವಲ್ಪಮಟ್ಟಿನ ವಿಚಾರಣೆ ಮಾಡಲಾಗಿತ್ತೆಂಬ ಕುರಿತ ಮೊಕದ್ದಮೆಯೂ ಇದಾಗಿರುವುದಿಲ್ಲ.ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪ ಆಯುಕ್ತರು ವರದಿಗಳನ್ನು ಸಲ್ಲಿಸಿದ್ದರೆಂಬುದು ರಾಜ್ಯದ ನಿಲುವಾಗಿದೆ.ಆದರೆ, ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ವಿಚಾರಣೆ ಮಾಡುವುದಕ್ಕೆ ಕೋರಲಾಗಿತ್ತು.ಆದುದರಿಂದ, ಸುಸಂಗತವಾದ ಕಾರಣವೆಂದರೆ ಜಿಲ್ಲಾ ಮ್ಯಾಜಿಸ್ಟ್ರೇಟರ ವ್ಯಕ್ತಿನಿಷ್ಠ ನಿರ್ಣಯ ಮತ್ತು ಅವರು ರೂಪಿಸಿದ ಅಭಿಪ್ರಾಯ ಈ ಮುಂಚೆಯೇ ಹೇಳಿರುವಂತೆ, ಜಿಲ್ಲಾ ಮ್ಯಾಜಿಸ್ಟ್ರೇಟರು, ಪೊಲೀಸ್ ಉಪ ಆಯುಕ್ತರುಗಳು ಸಲ್ಲಿಸಿದ ವರದಿಗಳ ಆಧಾರದ ಮೇಲೆ ಯಾವ ರೀತಿಯ ವಿಚಾರಣೆಯನ್ನು ಮಾಡಿದ್ದರು ಎಂಬ ಬಗ್ಗೆ ಪ್ರಶ್ನಿತ ಆದೇಶದಲ್ಲಿ ಪರೋಕ್ಷ ಸೂಚನೆಯೂ ಇರುವುದಿಲ್ಲ.ಈ ಹಿಂದೆ ಹೇಳಿರುವಂತೆ, ಜಿಲ್ಲಾ ಮ್ಯಾಜಿಸ್ಟ್ರೇಟರು ಯಾವುದೇ ಅಫಿಡಾವಿತ್ತನ್ನು ದಾಖಲಿಸಿರುವುದಿಲ್ಲ.ಕೆಲ ಉಪ ಆಯುಕ್ತರುಗಳು, ಸದರಿ ವಿನಿಯಮದ ಆದೇಶದ ಪ್ರಕಾರ ಯುಕ್ತ ವಿಚಾರಣೆ ಮಾಡಿದ ತರುವಾಯ ಅದೇ ದಿನಗಳಂದು (2019 ರ ಡಿಸೆಂಬರ್ 19 ರಿಂದ 21 ರ ವರೆಗೆ) ಪ್ರತಿಭಟನೆ ನಡೆಸುವುದಕ್ಕೆ ಈಗಾಗಲೇ ಅನುಮತಿಗಳನ್ನು ನೀಡಿದ್ದರೆಂಬುದು ಅಕ್ಷರಶಃ ಒಪ್ಪಿತ ಸ ಂ ಗತಿಯಾಗಿದೆ.ಆದರೆ, ವರದಿಗಳಲ್ಲಿ ಸದರಿ ಸ ಂ ಗತಿಗಳನ್ನು ಬಹಿರಂಗಪಡಿಸಿರುವುದಿಲ್ಲ.ಎರಡನೆಯದಾಗಿ, ಪೊಲೀಸ್ ಉಪ ಆಯುಕ್ತರುಗಳು ವರದಿಗಳಲ್ಲಿ ಏನನ್ನು ನಿರೂಪಿಸಿರುವರೇ ಅದರ ಹೊರತಾಗಿ, ಪ್ರಶ್ನಿತ ಆದೇಶದಲ್ಲಿ ಯಾವುದೇ ಸಂಗತಿಗಳನ್ನು ನಿರೂಪಿಸಿರುವುದಿಲ್ಲ.ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಮುಖ್ಯ ಸಂಗತಿಗಳು ಜಿಲ್ಲಾ ಮ್ಯಾಜಿಸ್ಟ್ರೇಟರು ಆದೇಶವನ್ನು ಹೊರಡಿಸುವುದಕ್ಕೆ ಮಹತ್ವಪೂರ್ಣ ಕಾರಣಗಳನ್ನು ಸೂಚಿಸಲೇಬೇಕು.

24. ಸರ್ವೋಚ್ಚ ನ್ಯಾಯಾಲಯವು ರಾಮಲೀಲಾ ಮೈದಾನ (ಮೇಅನ) ಚ ಮೊಕದ್ದಮೆಯಲ್ಲಿ, ಅದು ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಕಾರಣಗಳನ್ನು ದಾಖಲಿಸಬೇಕಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆ, ಅದು ಕಾರಣಗಳನ್ನು ದಾಖಲಿಸುವುದು ನ್ಯಾಯಿಕ ಅಥವಾ ಅರೆ ನ್ಯಾಯಿಕ ಚಲಾವಣೆಯಲ್ಲದಿರುವುದರಿಂದ, ಅದರ ಅಗತ್ಯತೆಯನ್ನು, ಮಿತಿಯನ್ನು ಮೀರಿ ವಿಸ್ತರಿಸಲಾಗುವುದಿಲ್ಲ ಎಂಬುದು ಸತ್ಯ. ಆದರೆ ಈ ಮೊಕದ್ದಮೆಯಲ್ಲಿ ಪ್ರಶ್ನೆತ ಆದೇಶದಲ್ಲಿ ಕಾರಣಗಳು

ಸಂಪೂರ್ಣವಾಗಿ ಗೈರುಹಾಜರಾಗಿದೆ.ಹೀಗಿರುವಾಗ, ಕಾರಣಗಳು ಸಮರ್ಪಕವಾಗಿವೆ ಅಥವಾ ಅಸಮರ್ಪಕವಾಗಿವೆ ಎಂಬ ಪ್ರಶ್ನೆಯು ಇಲ್ಲಿ ಉದ್ಭವವಾಗುವುದೇ ಇಲ್ಲ. ವಿಚಾರಣೆಯನ್ನು ಮಾಡಿದ ತರುವಾಯ ಪೊಲೀಸ್ ಉಪ-ಆಯುಕ್ತರ ವರದಿಗಳಲ್ಲಿ ನಮೂದಿಸಿದ ಆತಂಕಗಳು ಸರಿಯಾಗಿವೆಯೇ ಎಂಬ ಬಗ್ಗೆ ಪೊಲೀಸ್ ಆಯುಕ್ತರಿಗೆ ಮನವರಿಕೆಯಾಗಿತ್ತೆಂಬುದು 144 ನೇ ಪ್ರಕರಣದ ಅಡಿಯಲ್ಲಿನ ಪ್ರಶ್ನಿತ ಆದೇಶವು ಸೂಚಿಸಿದ್ದರೆ, ಇದು ಮತ್ತೊಂದು ವಿಷಯವಾಗುತ್ತಿತ್ತು.

25. ಮಾನ್ಯ ಅಡ್ವೊಕೇಟ್ ಜನರಲ್, ಡಿ.ಜಿ ಮತ್ತು ಐ.ಜಿ. ಯವರು ಹೊರಡಿಸಿದ ಪತ್ರಗಳ ವ್ಯವಹಾರವನ್ನು ಸೂಚಿಸಿದ್ದು, ಅವು ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವ ಅಗತ್ಯತೆಯನ್ನು ದಾಖಲಿಸುತ್ತದೆ.ಮೊದಲನೆಯದಾಗಿ, ಪ್ರಶ್ನಿತ ಆದೇಶದಲ್ಲಿ ಪೊಲೀಸ್ ವರಿಷ್ಠ ಅಧಿಕಾರಿಯು ವ್ಯಕ್ತಪಡಿಸಿದ ಅಭಿಪ್ರಾಯದ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ.ಗ ಎರಡನೆಯದಾಗಿ, ಪೊಲೀಸ್ ಇಲಾಖೆಯಲ್ಲಿ ಡಿಜಿ ಮತ್ತು ಐಜಿ ಯವರು 0 ರಾಜ್ಯದಲ್ಲಿನ ಅತ್ಯುನ್ನತ ಪೊಲೀಸ್ ಅಧಿಕಾರಿಗಳಾಗಿದ್ದು, ಪೊಲೀಸ್ ಆಯುಕ್ತರು ಇವರ ಅಧೀನಕ್ಕೆ ಒಳಪಡುತ್ತಾರೆ.ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಪೊಲೀಸ್ ಆಯುಕ್ತರು ಅಧಿಕಾರ ಚಲಾಯಿಸುವಾಗ, ಅವರು ಪೊಲೀಸ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸದೇ ಅವರು, ಜಿಲ್ಲಾ ಮ್ಯಾಜಿಸ್ಟ್ರೇಟರ್ರಂತೆ ಕಾರ್ಯ ನಿರ್ವಹಿಸಿರುತ್ತಾರೆ.ಆದ್ದರಿಂದ ಅವರು ಪೊಲೀಸ್ ವ್ಯವಸ್ಥೆಯಲ್ಲಿ ಪ್ರಾಸಂಗಿಕವಾಗಿ ವರಿಷ್ಠ ಅಧಿಕಾರಿಯಾಗಿರುವ ಪೊಲೀಸ್ ಅಧಿಕಾರಿಗಳು ವ್ಯಕ್ತಪಡಿಸಿದ ಅಭಿಪ್ರಾಯದ ಮೇಲೆ ಸುಲಭವಾಗಿ ಅವಲಂಬಿಸಬಾರದು.ವಾಸ್ತವವಾಗಿ ಅವರು, 144 ನೇ ಪ್ರಕರಣದ ಅಡಿಯಲ್ಲಿನ ಆದೇಶವನ್ನು ಹೊರಡಿಸುವಾಗ, ಪೊಲೀಸ್ ಅಧಿಕಾರ ಶ್ರೇಣೀಕರಣದಲ್ಲಿ ತನ್ನ ವರಿಷ್ಠ ಅಧಿಕಾರಿಯ ಸೌಮ್ಯ ಆರ್. ರೆಡ್ಡಿ -ವಿರುದ್ಧ ಕರ್ನಾಟಕ ಸರ್ಕಾರ, ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು ಅಭಿಪ್ರಾಯದಿಂದ ಪ್ರಭಾವಿತರಾಗಬಾರದು.ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶದ ಪರಿಣಾಮವು ನಾಗರಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವುದಾಗಿರುವುದರಿಂದ, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಜಿಲ್ಲಾ ಮ್ಯಾಜಿಸ್ಟ್ರೇಟರ ವ್ಯಕ್ತಿನಿಷ್ಠ ನಿರ್ಧಾರ ಮತ್ತು ಅಭಿಪ್ರಾಯ ರೂಪಿಸುವಿಕೆಯು, ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸುವುದಕ್ಕಾಗಿ ಪೂರ್ವ ನಿದರ್ಶನದ ಷರತ್ತಾಗಿರುತ್ತದೆ.ಹಾಗಾಗಿ ಇದು ಕೊನೆಪಕ್ಷ ಸಂಕ್ಷಿಪ್ತ ಕಾರಣಗಳನ್ನು ದಾಖಲಿಸಲು ಅಗತ್ಯಪಡಿಸುತ್ತದೆ.

26. ಸರ್ವೋಚ್ಚ ನ್ಯಾಯಾಲಯವು ಅನುರಾಧ ಭಾಸಿನ್ (ಮೇಅನ) ಮೊಕದ್ದಮೆಯ ನಿರ್ಣಯದಲ್ಲಿ, ಕಾರಣಗಳನ್ನು ದಾಖಲಿಸುವ ಅಗತ್ಯತೆಯನ್ನು ಪುನಃ ಪುನಃ ಒತ್ತಿ ಹೇಳಿದೆ.ಸರ್ವೋಚ್ಚ ನ್ಯಾಯಾಲಯವು, 129 ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯ ಪಟ್ಟಿದೆ:

"129. ನಾವು ದಂಡ ಪ್ರಕ್ರಿಯಾ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶಗಳು ಜನಸಾಮಾನ್ಯರ ಮೂಲಭೂತ ಹಕ್ಕುಗಳ ಮೇಲೆ ನೇರವಾದ ಪರಿಣಾಮವನ್ನು ಬೀರಲಿದೆ ಎಂಬುದನ್ನು ಗಮನಕ್ಕೆ ತಂದುಕೊಳ್ಳಬಹುದು.ಅಂಥ ಅಧಿಕಾರವನ್ನು ಸಾಂದರ್ಭಿಕ ರೀತಿಯಲ್ಲಿ ಮತ್ತು ಹಗುರ ರೀತಿಯಲ್ಲಿ ಬಳಕೆ ಮಾಡಿದರೆ ಅದು ತೀವ್ರತರದ ಕಾನೂನು ಬಾಹಿರತೆಗೆ ಕಾರಣವಾಗುತ್ತದೆ.ಈ ಅಧಿಕಾರವನ್ನು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕ್ರಮವಾಗಿ ಮಾತ್ರವೇ ತುಂಬಾ ಜವಾಬ್ದಾರಿಯುತವಾಗಿ ಬಳಕೆ ಮಾಡತಕ್ಕದ್ದು.ಈ ಆದೇಶವು ನ್ಯಾಯಿಕ ಪುನರೀಕ್ಷಣೆಗೆ ಮುಕ್ತವಾಗಿರುತ್ತದೆ.ಹಾಗಾಗಿ ಅಂಥ ಕ್ರಮದಿಂದ ಬಾಧಿತನಾದ ಯಾರೇ ವ್ಯಕ್ತಿಯೂ ಅದನ್ನು ಸಮುಚಿತ ವೇದಿಕೆಗಳನ್ನು ಸಂಪರ್ಕಿಸಿ ಅದನ್ನು ಯಾವಾಗಲೂ ಪ್ರಶ್ನಿಸಬಹುದು.

ಆದರೆ, ಆದೇಶವು ಸ್ವತಃ

ಅತಾರ್ಕಿಕವಾಗಿದ್ದರೆ ಅಥವಾ ಅಲಕ್ಷ್ಯದ ಅಂಶಗಳಿಂದ ಕೂಡಿದ್ದರೆ ನ್ಯಾಯಿಕ ಪುನರೀಕ್ಷಣೆಯ ಮೇಲೆ ಹೇಳಲಾದ ಸಾಧನವು ದುರ್ಬಲವಾಗುತ್ತದೆ.ಈ ನ್ಯಾಯಾಲಯವು ಬಾಬುಲಾಲ್ ಪರಾಟೆ (ಮೇಅನ) ಮೊಕದ್ದಮೆಯಲ್ಲಿ ಸಹ ಲಿಖಿತವಾಗಿ ಆದೇಶವನ್ನು ಹೊಂದುವ ಅಗತ್ಯತೆಯನ್ನು ಒತ್ತಿ ಹೇಳಿದ್ದು, ಅದರಲ್ಲಿ ಮ್ಯಾಜಿಸ್ಟ್ರೇಟರು, ಮೊಕದ್ದಮೆಯ ಮುಖ್ಯ ಸಂಗತಿಗಳನ್ನಾಧರಿಸಿ ಅಭಿಪ್ರಾಯವನ್ನು ರೂಪಿಸಬೇಕೆಂದು ಸ್ಪಷ್ಟವಾಗಿ ಸೂಚಿಸಿದೆ.ಈ ನ್ಯಾಯಾಲಯ ಹೇಳಿರುವ ಅಭಿಪ್ರಾಯ ಈ ಕೆಳಗಿನಂತಿದೆ:

“9. ( 1) ನೇ ಉಪ-ಪ್ರಕರಣವು ಕಾರ್ಯನಿರ್ವಾಹಕರಿಗಲ್ಲದೆ ಕೆಲವು ಮ್ಯಾಜಿಸ್ಟ್ರೇಟರುಗಳಿಗೂ ಅಧಿಕಾರಗಳನ್ನು ನೀಡುತ್ತದೆ.

(1) ನೇ ಉಪ-ಪ್ರಕರಣದ ಅಡಿಯಲ್ಲಿ ಸ್ವತಃ ಮ್ಯಾಜಿಸ್ಟ್ರೇಟರು, ಈ ಪ್ರಕರಣದ ಅಡಿಯಲ್ಲಿ ಮುಂದುವರೆಯುವುದಕ್ಕೆ ಸಾಕಷ್ಟು ಕಾರಣಗಳಿವೆಯೆಂದು ಮತ್ತು ತಕ್ಷಣದ ನಿರ್ಬಂಧ ಅಥವಾ ತುರ್ತು ಪರಿಹಾರೋಪಗಳು ಅಪೇಕ್ಷಣೀಯವಾಗಿವೆಯೆಂದು ತನ್ನ ಅಭಿಪ್ರಾಯವನ್ನು ನಿರೂಪಿಸಬೇಕಾಗುತ್ತದೆ.ಅಲ್ಲದೆ, ಈ ಉಪ ಪ್ರಕರಣವು ಮ್ಯಾಜಿಸ್ಟ್ರೇಟರು ಅಖಿತದಲ್ಲಿ ಆದೇಶವನ್ನು ಮಾಡಲು ಅದರಲ್ಲಿ ಯಾವ ಕಾರಣಗಳಿಗಾಗಿ ಅದರಡಿಯಲ್ಲಿ ಆದೇಶವನ್ನು ಮಾಡಲಾಗುತ್ತಿದೆ ಎಂಬ ಮುಖ್ಯ ಸಂಗತಿಗಳನ್ನು ದಾಖಲಿಸಬೇಕೆಂದು ಅಗತ್ಯಪಡಿಸುತ್ತದೆ.ಅಲ್ಲದೆ, ಯಾವ ನಿರ್ದಿಷ್ಟ ಕಾರ್ಯ ಚಟುವಟಿಕೆಗಳ ಸಂಬಂಧದಲ್ಲಿ ನಿರ್ಬಂಧಗಳನ್ನು ಹೇರಲು ಹಕ್ಕುಳ್ಳವರಾಗಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿದೆ ".(ಒತ್ತು ನೀಡಲಾಗಿದೆ)

27. 132 ನೇ ಪ್ಯಾರಾದಲ್ಲಿಯೂ ಸಹ ಸರ್ವೋಚ್ಚ ನ್ಯಾಯಾಲಯವು, ನ್ಯಾಯಿಕ ಚ ಪುನರೀಕ್ಷಣೆಯ ಅಧಿಕಾರದ ಅಸ್ತಿತ್ವವನ್ನು ನಿರಾಕರಿಸಲಾಗದು ಮತ್ತು ಈ ಅಧಿಕಾರವನ್ನು ಅನ್ವಯಿಸಿರುವುದಕ್ಕೆ ಸಂಬಂಧಿಸಿದಂತೆ ಮುಖ್ಯ ಸಂಗತಿಗಳನ್ನು ನಿರೂಪಿಸುವುದನ್ನು ಕಾನೂನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಗತ್ಯಪಡಿಸಿದೆ.129 ನೇ ಪ್ಯಾರಾದಲ್ಲಿ ಸರ್ವೋಚ್ಚ ನ್ಯಾಯಾಲಯವು, ಆದೇಶವು ಸ್ವತಃ ಅತಾರ್ಕಿಕ ಅಥವಾ ಅಸಮರ್ಪಕ ಆದೇಶವಾಗಿದ್ದರೆ ಅದು, ಸಂವಿಧಾನದ ಮೂಲ ಲಕ್ಷಣವಾಗಿರುವ ನ್ಯಾಯಿಕ ಪುನರೀಕ್ಷಣೆಯ ಅಧಿಕಾರವನ್ನು ದುರ್ಬಲಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ.140 ನೇ ಪ್ಯಾರಾದಲ್ಲಿ ತಾಳಿದ ನಿರ್ಣಯದಲ್ಲಿಯೂ ಸಹ ಸರ್ವೋಚ್ಚ ನ್ಯಾಯಾಲಯವು ಸದರಿ ಸಂಹಿತೆಯ 144 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಜವಾಬ್ದಾರಿಯುತವಾಗಿ ಮತ್ತು ಆದೇಶಗಳ ನ್ಯಾಯಿಕ ಪರಿಶೀಲನೆಯನ್ನು ಸಮರ್ಥಗೊಳಿಸುವ ಆ ಚಿಂತನೆಯ ಸೂಚಕವಾದ ಮುಖ್ಯ ಸಂಗತಿಗಳನ್ನು ಆಧರಿಸಿ ಚಲಾಯಿಸತಕ್ಕದ್ದು.ದುರದೃಷ್ಟವಶಾತ್, ಪ್ರಸ್ತುತ ಮೊಕದ್ದಮೆಯಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟರು ಎಲ್ಲಿಯೂ ತಮ್ಮ ಸ್ವತಂತ್ರವಾದ ಚಿಂತನೆಗಳನ್ನು ಅನ್ವಯಿಸಿದಂತೆ ಕಂಡುಬರುವುದಿಲ್ಲ.

28. ರಾಜ್ಯ ಸರ್ಕಾರವು ದಾಖಲಿಸಿದ ಆಕ್ಷೇಪಣೆಗಳ ಹೇಳಿಕೆಗಳನ್ನು ಅವಗಾಹಿಸಿದಾಗ, ಅದರಲ್ಲಿ ಪೊಲೀಸ್ ಸಹಾಯಕ ಆಯುಕ್ತರು ಆಕ್ಷೇಪಣೆಗಳನ್ನು ದೃಢೀಕರಿಸಿ ಪಶ್ನಿತ ಆದೇಶವನ್ನು ಸಮರ್ಥಿಸುವುದಕ್ಕಾಗಿ ವಿವಿಧ ಪೂರಕ ಕಾರಣಗಳನ್ನು ಸೇರಿಸಲು ಪ್ರಯತ್ನಿಸಿದರೆಂಬುದು ಕಂಡುಬರುತ್ತದೆ.ಕಾರಣಗಳನ್ನು ಸೇರಿಸುವುದಕ್ಕೆ ನಡೆಸಿದ ಅಂಥ ಪ್ರಯತ್ನವನ್ನು ಸರ್ವೋಚ್ಚ ನ್ಯಾಯಾಲಯವು ಅಸಮ್ಮತಿಸಿದೆ.ಈ ಸಂಬಂಧದಲ್ಲಿ, ಸರ್ವೋಚ್ಚ ನ್ಯಾಯಾಲಯವು ಮೊಹಿಂದರ್ ಸಿಂಗ್ ಗಿಲ್ (ಮೇಲಿನ) ಮೊಕದ್ದಮೆಯಲ್ಲಿನ ನಿರ್ಣಯದ 8 ನೇ ಪ್ಯಾರಾದಲ್ಲಿ ಅಭಿಪ್ರಾಯಪಟ್ಟಿರುವುದನ್ನು ಉದ್ಧರಿಸುವುದನ್ನು ವಿರೋಧಿಸಲು ನಮಗೆ ಸಾಧ್ಯವಾಗದು.ಸರ್ವೋಚ್ಚ ಚ ನ್ಯಾಯಾಲಯವು, 8 ನೇ ಪ್ಯಾರಾದಲ್ಲಿ ಅದು ಈ ಮುಂಚಿನ ಗೋಧನ್ದಾಸ್ ಭನಃ ಮೊಕದ್ದಮೆಯ ಸುಪರಿಚಿತ ನಿರ್ಣಯವನ್ನು ಅವಲಂಬನೆಯಾಗಿ ತೆಗೆದುಕೊಂಡಿದ್ದು, ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಚ ಅಭಿಪ್ರಾಯಪಟ್ಟಿದೆ:

“8. ಅದಕ್ಕೆ ಸಮನಾದ ಎರಡನೇ ಸುಸಂಗತವಾದ ವಿಷಯವೆಂದರೆ, ನಿರ್ದಿಷ್ಟ ಕಾರಣಗಳ ಆಧಾರದ ಮೇಲೆ ಶಾಸನಬದ್ಧ ಕಾರ್ಯನಿರ್ವಾಹಕರು ಆದೇಶವನ್ನು ಮಾಡಿದಾಗ, ಅದರ ಸಿಂಧುತ್ವವನ್ನು ಈಗಾಗಲೇ ನಮೂದಿಸಿದ ಕಾರಣಗಳ ಮೂಲಕ ತೀರ್ಮಾನಿಸಬೇಕಾಗುತ್ತದೆಯೇ ಹೊರತು ಅಫಿಡಾವಿಟ್ಟಿನ ಅಥವಾ ಅನ್ಯಥಾ ರೂಪದಲ್ಲಿ ಹೊಸ ಕಾರಣಗಳನ್ನು ಒದಗಿಸಿರಬಾರದು.ಆದೇಶವು ಪ್ರಾರಂಭದಲ್ಲಿ ದೋಷಯುಕ್ತ ಆದೇಶವಾಗಿರಬಹುದಾದರೂ, ಆದೇಶವನ್ನು ಪ್ರಶ್ನಿಸಿದ ಕಾರಣದಿಂದ ನ್ಯಾಯಾಲಯಕ್ಕೆ ಬರುವ ವೇಳೆಗೆ ತರುವಾಯ ಮಂಡಿಸಿದ ಹೆಚ್ಚುವರಿ ಆಧಾರಗಳಿಂದ ಮಾನ್ಯತೆ ಪಡೆಯಬಹುದಾಗಿದೆ.ಗೋಧನ್ದಾಸ್ ಭನ್ಜಿ (ಎಐಆರ್ 1952 ಎಸ್ಸಿ 16) (ಪುಟ 18 ರಲ್ಲಿ) ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಬೋಸ್ ರವರು ಮಂಡಿಸಿದ ಅಭಿಪ್ರಾಯದ ಕಡೆಗೆ ಗಮನ ನೀಡಬಹುದು:

" ಶಾಸನಾತ್ಮಕ ಅಧಿಕಾರವನ್ನು ಚಲಾಯಿಸಿ ಸಾರ್ವಜನಿಕವಾಗಿ ಮಾಡಲಾದ ಸಾರ್ವಜನಿಕ ಆದೇಶಗಳನ್ನು, ಅಧಿಕಾರಿಯು ತಾನು ಯಾವ ಉದ್ದೇಶಕ್ಕಾಗಿ ಆದೇಶವನ್ನು ಮಾಡಲಾಗಿದೆ ಅಥವಾ ಆತನ ಆಲೋಚನೆ ಏನಾಗಿತ್ತು ಅಥವಾ ಅವನು ಏನನ್ನು ಮಾಡಲು ಉದ್ದೇಶಿಸಿದ್ದಾನೆ ಎಂಬ ಬಗ್ಗೆ ಸಾರ್ವಜನಿಕ ಪ್ರಾಧಿಕಾರಿಗಳು ಮಾಡುವ ಸಾರ್ವಜನಿಕ ಆದೇಶಗಳು ಸಾರ್ವಜನಿಕ ಪರಿಣಾಮಗಳನ್ನು ಹೊಂದಿರುವಂತಿರಬೇಕು ಮತ್ತು

ಯಾರಾರಿಗೆ ಆದೇಶವು ಅನ್ವಯವಾಗುತ್ತದೇ ಅವರೆಲ್ಲರ ಕೆಲಸ ಮತ್ತು ವರ್ತನೆಯ ಮೇಲೆ ಪರಿಣಾಮ 86 ಬೀರಬೇಕು ಮತ್ತು ಸ್ವತಃ ಆದೇಶದಲ್ಲಿ ಬಳಸಿದ ಭಾಷೆಗೆ ಸಂಬಂಧಿಸಿದಂತೆ ವಸ್ತುನಿಷ್ಠವಾಗಿ ಅರ್ಥವಾಗಬೇಕು ".

29. ಆದ್ದರಿಂದ ಮೇಲೆ ದಾಖಲಿಸಿದ ಕಾರಣಗಳಿಗಾಗಿ ಪ್ರಶ್ನಿತ ಆದೇಶವು ಸರ್ವೋಚ್ಚ ನ್ಯಾಯಾಲಯವು, ಅನುರಾಧ ಭಾಸಿನ್ (ಮೇಅನ) ಮತ್ತು ರಾಮಲೀಲಾ ಚ ಮೈದಾನ (ಮೇಅನ) ಮೊಕದ್ದಮೆಗಳಲ್ಲಿ ಮಂಡಿಸಿದ ಕಾನೂನಿನ ಹಿನ್ನೆಲೆಯಲ್ಲಿ ಅದು ಸಂಪೂರ್ಣವಾಗಿ ಕಾನೂನು ಬಾಹಿರವಾಗಿದೆ ಎಂಬ ಬಗ್ಗೆ ನಮಗೆ ಯಾವುದೇ ರೀತಿಯ ಸಂಶಯವಿಲ್ಲ.ವಾಸ್ತವವಾಗಿ, ಮೊದಲನೆಯದಾಗಿ ಪ್ರಶ್ನಿತ ಆದೇಶವು ಸ ಂ ಪೂರ್ಣವಾಗಿ ಕಾನೂನುಬಾಹಿರವಾಗಿದೆ.ಅವಶ್ಯ ಅವಕಾಶ ನೀಡಿದ ತರುವಾಯದಲ್ಲೂ, ಈ ಕಾನೂನುಬಾಹಿರತೆಯನ್ನು ಸರಿಪಡಿಸಲು ಅಥವಾ ಸಹಿಸಲು ಸಾಧ್ಯವಿಲ್ಲ.ಆದುದರಿಂದ, ನಾವು, ಪ್ರಶ್ನಿತ ಆದೇಶವನ್ನು ಜಾರಿ ಮಾಡುವ ಮೂಲಕ ಸದರಿ ಸಂಹಿತೆಯ 144 ನೇ ಪ್ರಕರಣದ (1) ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿರುವುದು ಕಾನೂನುಬಾಹಿರವಾಗಿತ್ತು ಎಂದು ಅಭಿಪ್ರಾಯ ಪಡುವುದು ಬಿಟ್ಟು ನಮಗೆ ಬೇರೆ ಆಯ್ಕೆಯೇ ಇಲ್ಲ.

30. ಮೇಲಿನ ನಿರ್ಣಯಗಳನ್ನು ದಾಖಲಿಸುವಾಗ, ನಾವು, ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಸಿಂಧುವಾದ ಆದೇಶವನ್ನು ಹೊರಡಿಸುವುದಕ್ಕೆ ರಾಜ್ಯ ಸರ್ಕಾರವು ಲಭ್ಯ ಕಾರಣಗಳೆಲ್ಲವನ್ನು ಹೊಂದಿತ್ತೆ ಎಂಬುದನ್ನು ಪ್ರಶ್ನಿಸಲು ನಾವು ಹೋಗುವುದಿಲ್ಲ ಎಂಬುದನ್ನು ನಾವು ಇಲ್ಲಿ ಸೂಚಿಸುತ್ತೇವೆ.ಅಲ್ಲದೆ, ನಾವು ಈ ದೃಷ್ಟಿಕೋನದ ಬಗ್ಗೆ ಯೋಚಿಸುವ ಅಗತ್ಯವೂ ಇಲ್ಲ. ಸಿಂಧುವಾದ ಆದೇಶವನ್ನು ಹೊರಡಿಸುವುದಕ್ಕೆ ಲಭ್ಯ ಕಾರಣಗಳನ್ನು ರಾಜ್ಯ ಸರ್ಕಾರವು ಹೊಂದಿತ್ತೆಂದು ಊಹಿಸಿದರೂ ಪ್ರಶ್ನಿತ ಆದೇಶವನ್ನು ಎತ್ತಿ ಹಿಡಿಯುವುದಕ್ಕೆ ಯಾವುದೇ ಆಧಾರಗಳಿರುವುದಿಲ್ಲ.ಏಕೆಂದರೆ, ಸರ್ವೋಚ್ಚ ನ್ಯಾಯಾಲಯವು, ಚ ಅನೂರಾಧ ಭಾಸಿನ್ (ಮೇಲಿನ) ಮೊಕದ್ದಮೆಯಲ್ಲಿ ಸಂಕ್ಷಿಪ್ತಗೊಳಿಸಿ ಮಂಡಿಸಿರುವ ಸುಸ್ಥಾಪಿತ ಮಾನದಂಡಗಳ ಹಿನ್ನೆಲೆಯಲ್ಲಿ ಪಶ್ನಿತ ಆದೇಶವು ನ್ಯಾಯಿಕ ಪರಿಶೀಲನೆಯ ಪರೀಕ್ಷೆಯನ್ನು ಸಮರ್ಥಿಸುವುದಿಲ್ಲ ಮತ್ತು ಸಮರ್ಥಿಸಲಾರವು.

31. ಈ ತೀರ್ಪು ಮತ್ತು ಆದೇಶದಲ್ಲಿ ನಾವು ಮಾಡಿದ ಅಭಿಪ್ರಾಯಗಳು ಪ್ರಶ್ನಿತ ಆದೇಶಕ್ಕೆ ಮಾತ್ರ ಸೀಮಿತವಾಗಿದೆ ಮತ್ತು ಸದರಿ ಸಂಹಿತೆಯ 144 ನೇ ಪ್ರಕರಣದ ( 1) ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದನ್ನು ಸಮರ್ಥಿಸುವ ಸನ್ನಿವೇಶ ಉದ್ಭವಿಸಿದರೆ, ರಾಜ್ಯ ಸರ್ಕಾರವು ಈ ವಿಷಯದಲ್ಲಿ ಅಸಹಾಯಕವಾಗಿದೆ ಎಂಬ ಅರ್ಥವನ್ನು ಈ ತೀರ್ಪು ಮತ್ತು ಆದೇಶಕ್ಕೆ ವ್ಯಾಖ್ಯಾನಿಸಬಾರದು.

32. ಮಧ್ಯಂತರ ಅರ್ಜಿಯಲ್ಲಿ ಅರ್ಜಿದಾರನು ಮಾಡಿರುವ ಮನವಿಗಳು ಪ್ರಶ್ನಿತ ಆದೇಶದ ಕಾನೂನು ಬಾಹಿರತೆಯ ವಿವಾದದ ಮೇಲೆ ಯಾವುದೇ ಪರಿಣಾಮವನ್ನು ಬೀರಲಿಲ್ಲ.

33. ಆದ್ದರಿಂದ, ಮೇಲೆ ದಾಖಲಿಸಿದ ಕಾರಣಗಳಿಗಾಗಿ, ನಾವುದಿನಾಂಕ: 18 ನೇ ಡಿಸೆಂಬರ್, 2019 (ರಿಟ್ ಅರ್ಜಿಸಂಖ್ಯೆ: 52731/2019 ಯ (ಅನುಬಂಧ ಎ) ರ ಪ್ರಶ್ನೆತ ಆದೇಶವು ಕಾನೂನು ಬಾಹಿರವಾಗಿದೆ ಎಂದು ಮತ್ತು ನ್ಯಾಯಿಕ ಪರಿಶೀಲನೆಯ ಪರೀಕ್ಷೆಯನ್ನು ಸಮರ್ಥಿಸುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುತ್ತೇವೆ.ಆದೇಶವು ಕಾರ್ಯಗತಗೊಂಡಿದೆಯೆಂಬ ಕಾರಣಕ್ಕಾಗಿ, ನಾವು ಅದನ್ನು ತಳ್ಳಿಹಾಕುವ ಔಪಚಾರಿಕ ಆದೇಶವನ್ನು ಹೊರಡಿಸುವುದಿಲ್ಲ.

ತದನುಸಾರವಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇವೆ:

6) ಪ್ರಶ್ನೆತ ಆದೇಶ ಕಾನೂನು ಬಾಹಿರವಾಗಿದೆ ಎಂದು ಅಭಿ ಪ್ರಾಯ ಪಟ್ಟು ಅರ್ಜಿಗಳನ್ನು ಭಾಗಶಃ ಪುರಸ್ಕರಿಸಲಾಗಿದೆ.ವೆಚ್ಚಗಳಿಗೆ ಯಾವುದೇ ಆದೇಶ ಇರುವುದಿಲ್ಲ.

(ii) ಇತ್ಯರ್ಥದಲ್ಲಿರುವ ಐ.ಎ. ವಿಲೇಯಾಗಿರುತ್ತದೆ.